ಬೆಲೆ : 2 ರೂ.

ಕಲ್ಯಾಣ ಕಿರಣ

ಮಾರ್ಚ 1996



ಕಲ್ಯಾಣ ಕಿರಣ

ಸಂಪುಟ 25 ಸಂಚಿಕೆ : 8 ಬಸವಶಕೆ : 862 ಮಾರ್ಚ್ 1996

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಧಾರವಾಡ ನಗರದ, ಹಳ್ಯಾಳ ರಸ್ತೆ, ರೇಲ್ವೆಗೇಟ್ ಬಳಿ ಇರುವ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ 1996ರ ಏಪ್ರಿಲ್ 13, 14 ಮತ್ತು 15 ರಂದು ಜರುಗಲಿರುವ ನಾಲ್ಕನೆಯ ಬಸವ ಧರ್ಮ ಸಮ್ಮೇಳನ ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ರಜತಮಹೋತ್ಸವ, ದ್ವಿತೀಯ ಪೀಠಾಧಿಕಾರಿಗಳ ಪೀಠಾರೋಹಣಕ್ಕೆ ಹೃತ್ಪೂರ್ವಕವಾಗಿ ಆಹ್ವಾನಿಸುತ್ತೇವೆ.

ಸಮಯಾಭಾವದಿಂದಲೂ, ಲೋಕಸಭಾ ಚುನಾವಣೆಯ ಕಾರಣದಿಂದಲೂ ಪ್ರಚಾರಕ್ಕೆ ಸಾಕಷ್ಟು ವೇಳೆ ಸಿಗುತ್ತಿಲ್ಲ, ಆದ್ದರಿಂದ ಎಲ್ಲರಿಗೂ ಪ್ರತ್ಯೇಕ ಆಹ್ವಾನವನ್ನು ಕಳಿಸಲು ಆಗುವುದಿಲ್ಲ. ಇದನ್ನೇ ಹೃತ್ಪೂರ್ವಕ ಆಹ್ವಾನವೆಂದು ಸ್ವೀಕರಿಸಿ ತಾವೆಲ್ಲರೂ ಆಗಮಿಸುತ್ತೀರಿ ಮತ್ತು ಹೆಚ್ಚು ಜನ ಪ್ರತಿನಿಧಿಗಳನ್ನು ಕರೆತರುತ್ತೀರಿ ಎಂದು ನಂಬಿದ್ದೇವೆ

ಶರಣುಗಳೊಡನೆ

ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ
ಸಂಚಾಲಕಿ ಜಗನ್ಮಾತಾ ಅಕ್ಕಮಹಾದೇವಿ
ಪೀಠಾರೋಹಣ ಸಮಿತಿ, ಧಾರವಾಡ - 580 003
ದೂರವಾಣಿ : 41005

ವಿಶೇಷ ಸೂಚನೆ :

೧. ಧಾರವಾಡ ನಗರದ ಕೇಂದ್ರ ಬಸ್ ನಿಲ್ದಾಣದಿಂದ ಸುಮಾರು ಎರಡೂವರೆ ಕಿಲೋಮೀಟರ್ ದೂರದಲ್ಲಿ, ಹಳ್ಯಾಳ ರಸ್ತೆಯಲ್ಲಿ ರೇಲ್ವೆಗೇಟ್ ಬಳಿ ಅಕ್ಕಮಹಾದೇವಿ ಆಶ್ರಮವಿದೆ. ಸಾಕಷ್ಟು ಸಿಟಿ ಬಸ್‌ಗಳಿವೆ; ಬರಲು ಅನುಕೂಲತೆ ಇದೆ.

೨. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪ್ರವಚನವು 12-2-1996 ರಿಂದ ಅವ್ಯಾಹತವಾಗಿ ಕೇಂದ್ರ ಬಸ್ ನಿಲ್ದಾಣದ ಸಮೀಪದಲ್ಲೇ ಇರುವ ಸುಪ್ರಸಿದ್ಧ ಕಡಪಾ ಮೈದಾನದಲ್ಲಿ ನಡೆದಿದ್ದು, ಅದರ ವೇದಿಕೆ ಬಳಿ ಕಾರ್ಯಕರ್ತರು ಹಗಲು-ರಾತ್ರಿ ಲಭ್ಯವಿರುತ್ತಾರೆ. ಪರವೂರಿನಿಂದ ಬರುವವರು ವಿವರಗಳಿಗಾಗಿ ಅವರ ಬಳಿ ವಿಚಾರಿಸಬಹುದು.

೩. ಇದೇ ಕಡಪಾ ಮೈದಾನದಲ್ಲಿ ದಿ. 12-4-1996 ರ ಬೆಳಿಗ್ಗೆಯಿಂದ ವಿಶೇಷ ಸ್ವಾಗತ ಕಛೇರಿಯನ್ನು ತೆರೆದಿದ್ದು ಬಸ್ ನಿಲ್ದಾಣದಿಂದ ನೇರವಾಗಿ ವಾಸ್ತವ್ಯಕ್ಕೆ ಗೊತ್ತು ಮಾಡಿದ ಸ್ಥಳಗಳಿಗೆ ಹೋಗಲು ಈ ಕಾರ್ಯಾಲಯದಲ್ಲಿ ಮಾಹಿತಿಯನ್ನು ಕೊಡಲಾಗುವುದು. ಆದ್ದರಿಂದ ಸಮ್ಮೇಳನ ಪ್ರತಿನಿಧಿಗಳು ಇಲ್ಲಿ ವಿಚಾರಿಸಬೇಕು.

||ಓಂ ಶ್ರೀಗುರುಬಸವಲಿಂಗಾಯನಮಃ||

ಧಾರವಾಡ ನಗರದ, ಉಳವಿ ರಸ್ತೆಯಲ್ಲಿರುವ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ
1996ರ ಏಪ್ರಿಲ್ 13, 14 ಮತ್ತು 15 ರಂದು

ನಾಲ್ಕನೆಯ ಬಸವ ಧರ್ಮ ಸಮ್ಮೇಳನ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಸ್ಮರಣಾರ್ಥ ಪ್ರತಿವರ್ಷದ ಜನವರಿ 12 ರಿಂದ 15ರವರೆಗೆ ಶರಣ ಮೇಳವು ನಡೆದು ಬರುತ್ತಿದೆಯಷ್ಟೆ. ಮುಸಲೀಮರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಗಯೆ ಪವಿತ್ರ ಧರ್ಮಕ್ಷೇತ್ರಗಳಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಅರ್ಥಾತ್ ಲಿಂಗಾಯತ ಧರ್ಮೀಯರಿಗೆ ಧರ್ಮಕರ್ತ ಬಸವಣ್ಣನವರ ಐಕ್ಯಸ್ಥಾನವಾದ ಕೂಡಲ ಸಂಗಮವೇ ಧರ್ಮಕ್ಷೇತ್ರವಾದ ಕಾರಣ ಲಿಂಗಾಯತರು ವರ್ಷಕ್ಕೊಮ್ಮೆಯಾದರೂ ಒಂದು ಕಡೆ ಸೇರಿ ತಮ್ಮ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕು ಎಂಬುದೇ ಶರಣ ಮೇಳದ ಉದ್ದೇಶ. ಅಂತಹ ಶರಣ ಮೇಳವು 1993ರ ಜನವರಿಯಲ್ಲಿ ನಡೆದಾಗ, ಆ ಮಹಾಗಣಸಭೆಯಲ್ಲಿ ಒಂದು ನಿರ್ಣಯವನ್ನು ಕೈಗೊಳ್ಳಲಾಯಿತು. ಎಲ್ಲೆಡೆಯಲ್ಲಿ ಚದುರಿ ಹೋಗಿರುವ ಲಿಂಗವಂತ ಧರ್ಮೀಯರನ್ನು ಸಂಘಟಿಸಲು ಸಂಸ್ಕಾರ ನೀಡಲು ಮತ್ತು ಏಕರೂಪದ ಆಚಾರ ವಿಚಾರಗಳನ್ನು ಸಮಾಜದಲ್ಲಿ ತರಲೋಸುಗ ವರ್ಷಕ್ಕೊಮ್ಮೆ ಇನ್ನಿತರ ಸ್ಥಳಗಳಲ್ಲೂ ವಾರ್ಷಿಕವಾಗಿ ಒಂದು ಸಮ್ಮೇಳನ ನಡೆಸಬೇಕೆಂದು ಲಿಂ|| ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ನಿರ್ಧರಿಸಲಾಯಿತು.

ಪ್ರಥಮ ಬಸವ ಧರ್ಮ ಸಮ್ಮೇಳನವನ್ನು ತಮಿಳುನಾಡಿನ ಊಟಿಯ ಪರಿಸರದಲ್ಲಿರುವ ಕಾಟೇರಿ, ಸಕಲಟ್ಟಿಯಲ್ಲಿ, ಎರಡನೆಯ ಸಮ್ಮೇಳನವನ್ನು ಆಂಧ್ರದ ರಾಜಧಾನಿ-ಹೈದರಾಬಾದಿನಲ್ಲೂ, ಮೂರನೆಯ ಸಮ್ಮೇಳನವನ್ನು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲೂ ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು. ನಾಲ್ಕನೆಯ ಸಮ್ಮೇಳನವನ್ನು ಧಾರವಾಡ ನಗರದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಆವರಣದಲ್ಲಿ ಏಪ್ರಿಲ್ 13, 14 ಮತ್ತು 15 ರಂದು ನಡೆಸಲು ಯೋಜಿಸಲಾಗಿದೆ.

ಶನಿವಾರ ದಿ. 13-4-1996ರಂದು ಬೆಳಿಗ್ಗೆ 10 ಗಂಟೆಗೆ ಧ್ವಜಾರೋಹಣ ಮತ್ತು ಉದ್ಘಾಟನೆ, ಸಂಜೆ 5-30ಕ್ಕೆ ಧರ್ಮಚಿಂತನೆಗೋಷ್ಠಿ.

ಭಾನುವಾರ ದಿ. 14-4-1996 ರಂದು ಬೆಳಿಗ್ಗೆ 10 ಗಂಟೆಗೆ ಧ್ವಜಾರೋಹಣ ಮತ್ತು ಸಮುದಾಯ ಪ್ರಾರ್ಥನಾ ಸಭೆ, ಸಂಜೆ 5-30 ಕ್ಕೆ ಧರ್ಮ ಚಿಂತನಗೋಷ್ಠಿ.

ಸೋಮವಾರ ದಿ 15-4-1996ರಂದು ಬೆಳಿಗ್ಗೆ 10 ಗಂಟೆಗೆ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಸಂಜೆ 4 ಗಂಟೆಗೆ ಮೆರವಣಿಗೆ ಮತ್ತು ಪಥಸಂಚಲನ.

ವಿಶೇಷ ಸೂಚನೆ : ಬೆಳಗಿನ ಕಾರ್ಯಕ್ರಮಗಳು ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಆವರಣದಲ್ಲಿ ನಡೆಯುತ್ತವೆ. ಸಂಜೆಯ ಕಾರ್ಯಕ್ರಮವು ಧಾರವಾಡ ನಗರದ ಕಡಪಾ ಮೈದಾನದಲ್ಲಿ ರೂಪುಗೊಂಡ ಪ್ರವಚನ ಮಂಟಪದಲ್ಲಿ ನಡೆಯುತ್ತವೆ.

ಇಂಥ ಸಮ್ಮೇಳನವನ್ನು ನಡೆಸುವುದರಿಂದ ಶರಣ ಬಂಧುಗಳೆಲ್ಲ ಒಟ್ಟಾಗಿ ಸೇರಲು, ಸಂಸ್ಕಾರ ಹೊಂದಲು, ಸಂಘಟನೆಯಾಗಲು, ಸಮಾನತಾ ಮನೋಭಾವ ಪಡೆಯಲು, ಧಾರ್ಮಿಕ ಸೋದರರೆಂಬ ಆತ್ಮೀಯತೆ ಹೊಂದಲು ವಾತಾವರಣ ನಿರ್ಮಾಣವಾಗುವುದು. ಬಸವಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷೆಯಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ಮಾರ್ಗದರ್ಶನದಲ್ಲಿ ನಡೆಯಲಿದೆ. ಈ ಸಮ್ಮೇಳನದಲ್ಲಿ ಹಲವಾರು ಪೂಜ್ಯರು, ಗಣ್ಯರು, ರಾಜಕೀಯ ನೇತಾರರು ಭಾಗವಹಿಸಿ ಉಪನ್ಯಾಸ ಮಾಡಲಿದ್ದಾರೆ. ಸಮ್ಮೇಳನದ ನಿರ್ವಹಣೆಗಾಗಿ ಬೃಹತ್ ಪ್ರಮಾಣದ ಖರ್ಚು ಬರಲಿದ್ದು, ತಮ್ಮೆಲ್ಲರ ಸಹಾಯ, ಸಹಕಾರ ಅತ್ಯಗತ್ಯ. ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ವಿವರಗಳನ್ನು ನೀಡಲಾಗಿದೆ.

ಮಹಾಪೋಷಕರು	:	10,000 ರೂಗಳಿಗೆ ಮೇಲೆ ಕೊಟ್ಟವರು
ಪೋಷಕರು	:	5,000 ರೂ
ದಾನಿಗಳು	:	1,000 ರೂ
ಹಿತೈಷಿಗಳು	:	500 ರೂ
ಪ್ರತಿನಿಧಿಶುಲ್ಕ	:	100 ರೂ

ಬಂದಂತಹ ಪ್ರತಿನಿಧಿಗಳಿಗೆ ಸೂಕ್ತವಾದ ಊಟ-ವಸತಿಯ ವ್ಯವಸ್ಥೆ ಮಾಡುವ ಹೊಣೆಗಾರಿಕೆ ನಮ್ಮ-ನಿಮ್ಮ ಮೇಲಿದೆ. ಆದ್ದರಿಂದ ತಾವೆಲ್ಲರೂ ಉದಾರವಾಗಿ ದೇಣಿಗೆ ನೀಡಬೇಕೆಂದು ಕೋರುತ್ತೇವೆ. ಸಮ್ಮೇಳನದ ಖರ್ಚುಪೂರೈಸಿ, ಹಣವು ಉಳಿದರೆ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಆವರಣದಲ್ಲಿ, ಬಸವಾಲಯ, ಶ್ರೀ ಅಕ್ಕಮಹಾದೇವಿ ಯೋಗಮಂಟಪ, ಬಸವೇಶ್ವರ ಕಲ್ಯಾಣ ಮಂಟಪ ಶರಣ ಮಂಟಪಗಳನ್ನು ಕಟ್ಟಲು ಯೋಜಿಸಲಾಗಿದೆ.

ಶರಣರ ಬರವೆಮಗೆ ಪ್ರಾಣಜೀವಾಳ

ಶರಣ. ಎನ್. ಪುಟ್ಟರುದ್ರಪ್ಪ
ಕಾರ್ಯಾಧ್ಯಕ್ಷರು, ಪೀಠಾರೋಹಣ
ಸಮಿತಿ ಮತ್ತು ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀಮಾತೆ ಅಕ್ಕಮಹಾದೇವಿ
ಪ್ರಧಾನ ಸಂಚಾಲಕಿ

ಸಮ್ಮೇಳನ ವ್ಯವಸ್ಥಾಪಕರು

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ ಸಮಿತಿ ಮತ್ತು ಲಿಂಗಾಯತ ಧರ್ಮ ಮಹಾಸಭಾ (ರಿ), ಬೆಂಗಳೂರು

ಸಂಪರ್ಕಿಸುವ ವಿಳಾಸಗಳು :-

ಲಿಂಗಾಯತ ಧರ್ಮ ಮಹಾಸಭಾ (ರಿ)
ಬಸವ ಮಂಟಪ, 2035
20ನೇ ಮೇನ್, 2ನೇ ವಿಭಾಗ
ರಾಜಾಜಿನಗರ,
ಬೆಂಗಳೂರು - 560 010
ದೂರವಾಣಿ : 080/3325335

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ
ಪೀಠಾರೋಹಣ ಸಮಿತಿ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆಗೇಟ್ ಬಳಿ
ಧಾರವಾಡ - 580 003
ದೂರವಾಣಿ : 0836-41005

ನಾಲ್ಕನೆಯ ಬಸವ ಧರ್ಮ ಸಮ್ಮೇಳನಕ್ಕೆ ಆಹ್ವಾನ

–ಮಾತಾಜಿ

ಶರಣ ಬಂಧುಗಳೇ,

ಧಾರವಾಡ ನಗರದಲ್ಲಿ ನಾಲ್ಕನೆಯ ಬಸವ ಧರ್ಮ ಸಮ್ಮೇಳನವು 1996ರ ಏಪ್ರಿಲ್ 13, 14 ಮತ್ತು 15ರಂದು ಏರ್ಪಾಟಾಗಿದೆ. ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಪ್ರತಿ ವರ್ಷ ಶರಣ ಮೇಳಕ್ಕೆ ಅಸಂಖ್ಯಾತ ಜನ ಆಗಮಿಸುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಈ ಸಂಖ್ಯೆ ಅದ್ಭುತವಾಗಿ ಬೆಳೆಯುತ್ತಿದೆ. ಇದಷ್ಟೇ ಸಾಲದು ಸ್ಥಳೀಯವಾಗಿ ಅಲ್ಲಲ್ಲೇ ಸಮ್ಮೇಳನ ಮಾಡಿದರೆ ವಿವಿಧ ಪ್ರಾಂತ್ಯಗಳಲ್ಲಿ ಜಾಗೃತಿಯು ಉಂಟಾಗಿ ಎಲ್ಲರನ್ನೂ ಹತ್ತಿರ ತರಲು, ಶರಣ ಬಂಧುಗಳ ಮಧ್ಯೆ ಆತ್ಮೀಯ ಬೆಸುಗೆ ಮೂಡಿಸಲು ಸಾಧ್ಯ ಎಂದು 1993ರ ಶರಣ ಮೇಳದಲ್ಲಿ ಲಿಂಗೈಕ್ಯ "ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿ"ಗಳ ದಿವ್ಯ ಸನ್ನಿಧಿಯಲ್ಲಿ ನಿರ್ಧರಿಸಲಾಯಿತು. 1993ರಲ್ಲಿ ಪ್ರಥಮ ಬಸವ ಧರ್ಮ ಸಮ್ಮೇಳನವು ತಮಿಳುನಾಡಿನ ಊಟಿಯ ಪರಿಸರದ ಕಾಟೇರಿ ಸಕಲಟ್ಟಿಯಲ್ಲಿ, ಎರಡನೆಯ ಸಮ್ಮೇಳನವು ಆಂಧ್ರ ಪ್ರದೇಶದ ರಾಜಧಾನಿ ಹೈದರಾಬಾದಿನಲ್ಲೂ, ಮೂರನೆಯ ಸಮ್ಮೇಳನವು ಬೆಂಗಳೂರಿನಲ್ಲೂ ನಡೆದವು. ಇದೀಗ ನಾಲ್ಕನೆಯ ಸಮ್ಮೇಳನವು 1996ರ ಏಪ್ರಿಲ್ 13, 14 ಮತ್ತು 15ರಂದು ಕರ್ನಾಟಕದ ಹೃದಯದಂತಿರುವ ಧಾರವಾಡ ನಗರದ ಉಳವಿ (ಹಳ್ಯಾಳ) ರಸ್ತೆಯ ರೇಲ್ವೆಗೇಟಿನ ಬಳಿ ಇರುವ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ನಡೆಯಲಿದೆ.

ಪ್ರಸ್ತುತ ಸಮ್ಮೇಳನದ ಮಹತ್ವ

ನಾಲ್ಕನೆಯ ಈ ಸಮ್ಮೇಳನ ಹಲವಾರು ವಿಶೇಷಗಳಿಂದ ಕೂಡಿದೆ

1. ಪೀಠಾರೋಹಣ ರಜತ ಮಹೋತ್ಸವ :

ಮಹಿಳಾ ಜಗದ್ಗುರು ಪೀಠವೊಂದರ ಅಗತ್ಯತೆಯನ್ನರಿತು 1970 ರಲ್ಲಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಜಗನ್ಮಾತ ಅಕ್ಕಮಹಾದೇವಿ ಅನುಭಾವ ಪೀಠವನ್ನು ಸ್ಥಾಪಿಸಿ, ನನ್ನನ್ನು ಪ್ರಥಮ ಜಗದ್ಗುರುವನ್ನಾಗಿ ಗದ್ದುಗೆಗೆ ಏರಿಸಿದರು. ಮಹಿಳಾ ಜಗದ್ಗುರು, ಪೀಠವು ಸ್ಥಾಪನೆಯಾಗಿ ಇಲ್ಲಿಗೆ 25 ವರ್ಷಗಳು ಪೂರೈಸಿದವು. ಪೀಠಾರೋಹಣದ ರಜತ ಮಹೋತ್ಸವವನ್ನೂ ಇದೀಗ ಆಚರಿಸಲಾಗುತ್ತಿದೆ.

2. ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1995ರ ಜೂನ್ 30 ರಂದು ಲಿಂಗೈಕ್ಯರಾಗಿ

ಕ್ರಿಯಾ ವಿಶ್ರಾಂತಿಯನ್ನು ಐದಿದರು. ಅವರ ಸದಿಚ್ಛೆಯಂತೆ ನಾನು ದಿ. 13-1-1996 ರಂದು ಕೂಡಲ ಸಂಗಮದಲ್ಲಿ ಎರಡನೆಯ ಪೀಠಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದೆ. ಅದರಿಂದ ತೆರವಾಗಿರುವ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ಎರಡನೆಯ ಅಧಿಕಾರಿಣಿಯನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ ಅವರನ್ನು ಆಯ್ಕೆ ಮಾಡಿದ್ದು ಅವರ ಪೀಠಾರೋಹಣವು, ಸೋಮವಾರ ದಿ. 15-4-1996 ರಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ.

3. ಈಗಾಗಲೇ ಪ್ರಸ್ತುತ ಪಡಿಸಿರುವಂತೆ ನಾಲ್ಕನೆಯ ಬಸವ ಧರ್ಮ ಸಮ್ಮೇಳನವು ನಡೆದು ಧರ್ಮಚಿಂತನ ಗೋಷ್ಠಿಗಳು ನಡೆಯಲಿದೆ. ಮಹತ್ವಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲಾಗುವುದು.

ಇಂಥ ಗಣ ಸಮಾವೇಶಗಳು ಬಹಳ ಮಹತ್ವ ಪೂರ್ಣವಾದುವು ಧರ್ಮಪಿತ ಬಸವಣ್ಣನವರು ಕೆಲವಾರು ವಚನಗಳ ಮೂಲಕ ಹೀಗೆ ಆದೇಶಿಸಿದ್ದಾರೆ ;

ಕಾಗೆ ಒಂದಗುಳ ಕಂಡಡೆ
ಕೂಗಿ ಕರೆಯದೆ ತನ್ನ ಬಳಗವೆಲ್ಲವನು?
ಕೋಳಿ ಒಂದು ಗುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವನು?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆಕೋಳಿಗಿಂತ ಕರಕಷ್ಟ, ಕೂಡಲ ಸಂಗಮದೇವಾ!

ಕಾಗೆ-ಕೋಳಿಯಂತಹ ಪಕ್ಷಿಗಳು ಸಹಿತ ತಮ್ಮದೇ ಆದ ಪರಿವಾರ ಒಕ್ಕೂಟ ಹೊಂದಿ ಗುಂಪುಗೂಡಿ ಬದುಕುತ್ತವೆ. ದೇವರನ್ನು ನಂಬಿದ ಭಕ್ತನಾಗಿಯೂ ಸಹ ಇಂತಹ ಆಧ್ಯಾತ್ಮಿಕ ಒಕ್ಕೂಟ ಹೊಂದಿರದಿದ್ದರೆ ಹೇಗೆ?

ಭಕ್ತ ಭಕ್ತನ ಮನೆಗೆ ಬಂದಡೆ
ಭೃತ್ಯಾಚಾರವ ಮಾಡಬೇಕು
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ
ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವನು. (246)

ಈ ವಚನದ ಸಾರಾಂಶ ಹೀಗಿದೆ : ಎಷ್ಟೇ ದೂರವಿರಲಿ ಭಕ್ತರು ಒಬ್ಬರೊಬ್ಬರು

ಭೇಟಿಯಾಗಿ, ಪರಸ್ಪರ ಕುಶಲಗಳನ್ನು ವಿಚಾರಿಸಬೇಕು, ಗಣ ಮೇಳಾಪ ಮಾಡಬೇಕು. ದಾಸೋಹ ಮಾಡಬೇಕು ಭೃತ್ಯಾಚಾರವ ಮಾಡಬೇಕು.

ತನುಮನ ಧನವಲಸದಂತೆ ಮಾಡಯ್ಯಾ
ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ
ಮನ ದಾಸೋಹಕ್ಕೆ ಲೀಯವಹಂತೆ ಮಾಡಯ್ಯಾ
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ
ಪರಿಣಾಮಿಸುವಂತೆ ಮಾಡು ಕೂಡಲ ಸಂಗಮದೇವಾ (459)

ಶರಣ ದಾಸೋಹದಲ್ಲಿ ತನು-ಮನ-ಧನಗಳು ತೊಡಗಬೇಕು ಸೇವೆ ಮಾಡುವಾಗ ತನುವು ಹರ್ಷಭರಿತವಾಗಿ, ಪುಳಕಿತಭಾವದಿಂದ ದುಡಿಯಬೇಕು. ಮನಸ್ಸು ಸಂತೋಷದಿಂದ ಶರಣರ ಮಧ್ಯೆ ಜ್ಞಾನಾಮೃತ ಪಾನ ಮಾಡುತ್ತಾ ನಲಿಯಬೇಕು. ಕಾಯಕದಿಂದ ಗಳಿಸಿದ ಹಣವು ಶರಣ-ದಾಸೋಹಕ್ಕೆ ಸವೆಯುವ ಸದವಕಾಶ ಪಡೆದುದಕ್ಕೆ ಹೆಮ್ಮೆ ಪಡಬೇಕು. ಹೀಗೆ ಶರಣರ ಮಧ್ಯೆ ನಿರಂತರವಾಗಿ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ, ಪರಿಣಾಮಿಸುವಂತೆ ಆಗಬೇಕು.

ಧರ್ಮಪಿತರ ಈ ಆಶಯವನ್ನು ಪೂರ್ಣಗೊಳಿಸಲಿಕ್ಕೆಂದೇ ಕೂಡಲ ಸಂಗಮದ ಶರಣ ಮೇಳ ಮತ್ತು ಬೇಸಿಗೆಯ ರಜದಲ್ಲಿ ನಡೆಯುವ ಬಸವ ಧರ್ಮ ಸಮ್ಮೇಳನ ರೂಪುಗೊಂಡಿವೆ. ಇಂಥ ಸಮ್ಮೇಳನ ನಡೆಸುವುದು ಬಹಳ ಶ್ರಮದಾಯಕ. ಸಾಕಷ್ಟು ಸಮಯವನ್ನು ಇದು ತಿನ್ನುತ್ತದೆ ಮತ್ತು ಖರ್ಚುವೆಚ್ಚವು ಬಹಳ. ಸಮ್ಮೇಳನಗಳ ಸಂಘಟನೆ ಮತ್ತು ಸಿದ್ಧತೆಗೆ ಅಮೂಲ್ಯ ಸಮಯ ವ್ಯಯವಾಗುತ್ತದೆ. ಇಷ್ಟಾದರೂ ಸಮ್ಮೇಳನ ಏರ್ಪಡಿಸುವ ಉದ್ದೇಶವೇನೆಂದರೆ ತಿಂಗಳುಗಟ್ಟಳೆ ಪ್ರವಚನ ಮಾಡಿ ಜನ ಜಾಗೃತಿ ಮಾಡಲು ಧರ್ಮಜ್ಞಾನ ನೀಡಲು ಅವಕಾಶ ಬಹಳ ಕಡಿಮೆ. ಆದ್ದರಿಂದ ಇನ್ನೂ ಎಲ್ಲೆಡೆ ಸಂಚರಿಸಿ ಪ್ರವಚನ ಮಾಡಲು ಆಗದು. ಬಸವ ತತ್ತ್ವಾನುಯಾಯಿಗಳನ್ನೂ ಒಂದೆಡೆ ತಂದು ಈ ತರಬೇತಿ ಕಮ್ಮಟದಂತಹ ಸಮ್ಮೇಳನಗಳಲ್ಲಿ ವಿಚಾರಧಾರೆಯನ್ನೂ ರೂಪುಗೊಳಿಸಬೇಕು. ಇದೊಂದೇ ಬಸವ ತತ್ತ್ವಾನುಯಾಯಿಗಳಿಗೆ ಉಳಿದಿರುವ ಮಾರ್ಗ.

ಆರ್ಥಿಕ ಸಮಸ್ಯೆ

ನಾವು ಪ್ರವಚನಗಳನ್ನೂ ಮಾಡಿದರೆ ಖರ್ಚು ಕಡಿಮೆ. ಆ ಖರ್ಚು ಆರತಿ ಹಣ ಮತ್ತು ಜನರು ಮಾಡುವ ಸಹಾಯದಲ್ಲಿ ಒದಗುತ್ತದೆ. ವಿಶೇಷವಾಗಿ ಕೊಡುವ ದೇಣಿಗೆಯಿಂದ ಸಂಸ್ಥೆಯ ಕಟ್ಟಡಗಳನ್ನು ಕಟ್ಟಿಸಲು ಅನುಕೂಲವಾಗುತ್ತದೆ. ಸಮ್ಮೇಳನಗಳು ಹಾಗಲ್ಲ; ಇದಕ್ಕೆ ತದ್ವಿರುದ್ಧ. ಖರ್ಚು ಜಾಸ್ತಿ, ಸಿದ್ಧತೆಗೆ ಸಮಯ ಹೋಗುವುದು. ಸಂಸ್ಥೆಯ ಕಟ್ಟಡನಿಧಿಗೆ

ಒದಗುವ ದೇಣಿಗೆಯ ಮೊತ್ತ ಕಡಿಮೆಯಾಗುವುದು. ಉದಾಹರಣೆಗೆ ಅಕ್ಟೋಬರ್-ನವಂಬರ್-ಡಿಸೆಂಬರ್ ತಿಂಗಳಲ್ಲಿ ಪೂಜಶ್ರೀ ಸದ್ಗುರು ಮಾತೆ ಗಂಗಾದೇವಿ ಮತ್ತು ಪೂಜ್ಯಶ್ರೀ ಮಾತೆ ಅಕ್ಕಮಹಾದೇವಿಯವರ ಪರಿಶ್ರಮ ಶರಣ ಮೇಳ ಪ್ರಚಾರಕ್ಕೆ ವಿನಿಯೋಗವಾಗುವುದು. ಸಂಗ್ರಹವಾಗುವ ದೇಣಿಗೆ ಶರಣ ಮೇಳ ನಿರ್ವಹಣೆಗೆ ಉಪಯೋಗವಾಗುವುದು. ನನ್ನ ಸಮಯ ಸಮ್ಮೇಳನದ ರೂಪು-ರೆಷೆ, ಸಿದ್ಧತೆಗೆ ಹೋಗುವುದು. ಇಷ್ಟೆಲ್ಲಾ ಇದ್ದೂ ಸಮ್ಮೇಳನ ಏರ್ಪಡಿಸುವ ಹುಮ್ಮಸ್ಸು ಕಡಿಮೆಯಾಗದು ಏಕೆಂದರೆ ಇದು 2-3 ದಿನಗಳಲ್ಲಿ ವಿಶೇಷ ತರಬೇತಿ ನೀಡಿ ಜನರನ್ನು ಚೈತನ್ಯಶೀಲರನ್ನಾಗಿ ಮಾಡುವುದು; ತತ್ತ್ವದ ಬೀಜಗಳನ್ನು ಜನಮನಕ್ಕೆ ಬಿತ್ತಲು ನೆರವಾಗುವುದು.

ನಮಗೆ ಸರ್ಕಾರದ ಧನ ಸಹಾಯವಾಗಲೀ, ಉನ್ನತ ದರ್ಜೆಯ ಅಧಿಕಾರವಂತರ ಬೆಂಬಲವಾಗಲಿ (ಕಡೆಗೆ ಪ್ರೋತ್ಸಾಹವಾಗಲಿ) ದೊಡ್ಡ ದೊಡ್ಡ ಸಂಘ-ಸಂಸ್ಥೆಗಳ, ತುಂಬಾ ದೊಡ್ಡ ಸಿರಿವಂತರ ಬಲವಾದ ಆರ್ಥಿಕ ನೆರವಾಗಲೀ ಇಲ್ಲ. ಏಕೆಂದರೆ ನಾವು ವಿಶಿಷ್ಟ ತತ್ತ್ವ-ನಂಬಿಕೆಗಳಿಗೆ ಬದ್ಧರಾಗಿದ್ದೇವೆ. ಮತಿಗೆಟ್ಟು ಯಾರನ್ನೂ ಹೊಗಳಲು ನಮಗೆ ಬರದು. ತತ್ತ್ವ ಬಲ್ಲವರ ತೊತ್ತಾಗಿರುವೆ ಎಂಬ ಧರ್ಮಪಿತರ ವಾಣಿ ನಮ್ಮ ಮೇಲಾಗಿ, ಅನವಶ್ಯಕವಾಗಿ ಯಾರನ್ನೂ ಹೊಗಳಿ, ಓಲೈಸಲು ನಮಗೆ ಬರದು ಆದ್ದರಿಂದ ಈ ದಿಶೆಯಲ್ಲಿ ತತ್ತ್ವ ಬಲ್ಲವರು ಮಾತ್ರ ನಮ್ಮ ಬೆನ್ನಬಲ; ಜಂಗಮ ಆಸ್ತಿ. ಆದ್ದರಿಂದ ತಮ್ಮೆಲ್ಲರ ತನು-ಮನ-ಧನಗಳ ಪ್ರೋತ್ಸಾಹ ನಮಗಿಂದು ಅತ್ಯಗತ್ಯವಾಗಿದೆ.

ಶರಣ ಮೇಳಕ್ಕೆ ಬಹಳ ಜನರು ಓಡಾಡಿ ಸಂಗ್ರಹಣೆ ಮಾಡಿರುತ್ತಾರೆ ಪುನಃ 3-4 ತಿಂಗಳ ಅವಧಿಯಲ್ಲಿ ಸಾರ್ವಜನಿಕವಾಗಿ ಸಂಗ್ರಹ ಮಾಡಲು ಕಾರ್ಯಕರ್ತರಿಗೆ ಸಂಕೋಚ; ಒತ್ತಾಯ ಮಾಡಿ ಸಂಗ್ರಹಿಸಿ ಎಂದು ಹೇಳಲು ನಮಗೆ ಮುಜುಗರ. ಆದ್ದರಿಂದ ನಾವಾಗಿಯೇ ಹೆಚ್ಚಿನ ಜನರಿಗೆ ರಸೀತಿ ಪುಸ್ತಕ ಕಳಿಸಿಲ್ಲ, ದೇಣಿಗೆ ಸಂಗ್ರಹಕ್ಕಾಗಿ ಆಯ್ಕೆ ಮಾಡಿ ಕೆಲವರ ಹೆಸರಿಗೆ ರಸೀತಿ ಪುಸ್ತಕ ಕಳಿಸಿದ್ದೇವೆ. ಆದ್ದರಿಂದ ಪರಿಸ್ಥಿತಿಯ ಹೊಣೆಗಾರಿಕೆಯನ್ನರಿತ ಸಮ್ಮೇಳನದ ಖರ್ಚು-ವೆಚ್ಚಕ್ಕೆ ಹೆಗಲು ಕೊಡಬೇಕೆಂದು ಬಯಸುವ ಶರಣ ಬಂಧುಗಳು ಪತ್ರ ಬರೆದು, ಫೋನ್ ಮಾಡಿ ರಸೀತಿ ಪುಸ್ತಕ ಕರಪತ್ರ ತರಿಸಿಕೊಳ್ಳಬೇಕು. ಜವಾಬ್ದಾರಿಯರಿತು ನೀವು ನೀವೇ ಕೆಲಸ ಮಾಡಬೇಕು. ವೈಯಕ್ತಿಕವಾಗಿ ನಿಮಗೆಷ್ಟು ಹೆಚ್ಚು ಸಾಧ್ಯವೋ ಅಷ್ಟು ಕೊಡಿರಿ ಎಷ್ಟು ಸಂಗ್ರಹಿಸಿಕೊಡಲು ಸಾಧ್ಯವೋ ಅಷ್ಟು ಕೊಡಿರಿ. ಪ್ರತಿನಿಧಿಗಳನ್ನು ಎಷ್ಟು ಹೆಚ್ಚು ಕರೆತರಲು ಸಾಧ್ಯವೋ ಪ್ರಚಾರಮಾಡಿ ಪ್ರೇರೇಪಣೆ ನೀಡಿರಿ. ಪ್ರತಿನಿಧಿ ಶುಲ್ಕವನ್ನು ಅಲ್ಲಿಯಾದರೂ ಸಂಗ್ರಹಿಸಿರಿ ಅಥವಾ ಇಲ್ಲಿಗೆ ಬಂದಾಗಲಾದರೂ ಕಟ್ಟಲು ಹೇಳಿರಿ.

ವಿ.ಸೂ. : ಬಸವ ಭಕ್ತರು ಸಮಾವೇಶವಾಗಿ ತತ್ತ್ವವನ್ನು ತಿಳಿದುಕೊಂಡು ನಂತರ ಪ್ರಚಾರ, ಅನುಷ್ಠಾನ ಮಾಡುವುದು ಅತ್ಯಗತ್ಯವಾದುದರಿಂದ ಪ್ರತಿನಿಧಿ ಶುಲ್ಕ ಕಡ್ಡಾಯವಲ್ಲ. ಆದ್ದರಿಂದ ಆಸಕ್ತರು ಉಚಿತವಾಗಿಯೂ ಭಾಗವಹಿಸಬಹುದು.

ಮಹತ್ವಪೂರ್ಣ ಚಿಂತನೆ

ಸಮ್ಮೇಳನದ ವೇದಿಕೆಯಿಂದ ಮಹತ್ವಪೂರ್ಣ ಚಿಂತನೆ ಮಾಡಿ, ನಿರ್ಣಯಗಳನ್ನೂ ತೆಗೆದುಕೊಳ್ಳಲಾಗುವುದು. ವೀರಶೈವ/ಲಿಂಗಾಯತಗಳಲ್ಲಿರುವ ಗೊಂದಲ ನಿವಾರಿಸಿ ನಿರ್ದಿಷ್ಟ ವಿಚಾರಧಾರೆ ರೂಪಿಸುವುದು ಅಗತ್ಯವಿದೆ. ಧರ್ಮಪಿತ ಬಸವಣ್ಣನವರನ್ನು ಧರ್ಮಗುರುವೆಂದು, ವಚನ ಸಾಹಿತ್ಯವನ್ನು ಧರ್ಮಸಂಹಿತೆ ಎಂದು ಜನಮನದಲ್ಲಿ ದೃಢಪಡಿಸಲು ವಿವಿಧ ಕಾರ್ಯಕ್ರಮ ರೂಪಿಸಬೇಕಾಗಿದೆ. 1996 ವಿಶ್ವಗುರು ಬಸವಣ್ಣನವರ ಲಿಂಗೈಕ್ಯ ವರ್ಷ. ಈ ಬಸವ ಪಂಚಮಿಗೆ ಧರ್ಮಪಿತರು ಲಿಂಗೈಕ್ಯರಾಗಿ ಸರಿಯಾಗಿ 800 ವರ್ಷಗಳಾದವು. ಆದ್ದರಿಂದ 1996ರ ಬಸವ ಜಯಂತಿಯಿಂದ 1997ರ ಬಸವ ಜಯಂತಿ ವರೆಗೆ ಬಸವ ಧರ್ಮ ಪ್ರಚಾರವನ್ನು ವ್ಯವಸ್ಥಿತವಾಗಿ ಮಾಡಲು ನಿರ್ಣಯಿಸಬೇಕಾಗಿದೆ. ನಿರಭಿಮಾನದಿಂದ, ಮೌಢ್ಯತೆಯಿಂದ, ಅಜ್ಞಾನದಿಂದ ಅನ್ಯ ಮತ ಪಂಥಗಳತ್ತ ನುಗ್ಗುತ್ತ ಸ್ವಧರ್ಮ ಕುರಿತು ಅಧ್ಯಯನ ಅನುಷ್ಠಾನ ಮಾಡದಿರುವ ಲಿಂಗಾಯತ ಧರ್ಮೀಯರನ್ನು ಅಂದರೆ ದಾರಿ ತಪ್ಪಿ ಅಲೆಯುವ ಧರ್ಮಬಂಧುಗಳನ್ನು ಮರಳಿ ಮನೆಗೆ ಕರೆಯುವ ಸಲುವಾಗಿ ಹಾಕಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸುವುದು ಅಗತ್ಯವಿದೆ. ಗುಲಬರ್ಗಾದಲ್ಲಿ ರೂಪುಗೊಂಡ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರಿಡಲು ವಿನಾಕಾರಣ ವಿಳಂಬ ಮಾಡುತ್ತಿರುವ ಮುಖ್ಯ ಮಂತ್ರಿ ಹೆಚ್.ಡಿ. ದೇವೇಗೌಡರ ಧೋರಣೆಯ ವಿಶ್ಲೇಷಣೆ ಅಗತ್ಯವಿದೆ. ಹೀಗೆ ಹಲವಾರು ವಿಷಯ ಪ್ರಸ್ತಾಪವಾಗಲಿರುವ ಸಮ್ಮೇಳನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಸವ ಭಕ್ತರು ಆಗಮಿಸುವುದು ಅತ್ಯಗತ್ಯವಿದೆ.

ಸ್ವಯಂ ಪ್ರೇರಣೆಯ ಕಳಕಳಿ

ಬಹುಪಾಲು ಲಿಂಗವಂತರಿಗೆ ಧರ್ಮಗುರು ಬಸವಣ್ಣನವರು ಕೊಟ್ಟ ಮಹತ್ವಪೂರ್ಣ ತತ್ತ್ವ, ಧರ್ಮದ ಆಳಹರವು ಗೊತ್ತಿಲ್ಲ. ಅನೇಕರಿಗೆ ತಿಳಿದುಕೊಳ್ಳಬೇಕೆಂಬ ಹಂಬಲ, ಕಾತುರ ಇಲ್ಲ. ತಿಳಿದುಕೊಂಡ ಕೆಲವರಿಗೆ ಅದನ್ನು ಅನುಷ್ಠಾನ ಮಾಡುವ ಹಂಬಲವಿಲ್ಲ. ಮತ್ತೆ ಕೆಲವರಿಗೆ ಈ ಒಳ್ಳೆಯ ಮೌಲ್ಯ ನಂಬಿಕೆಗಳನ್ನು ಪ್ರಚಾರ ಮಾಡುವ ಕಳಕಳಿಯಿಲ್ಲ. ಮತ್ತೆ ಕೆಲವರಿಗೆ, ಪ್ರಚಾರ ಮಾಡಬೇಕೆನ್ನುವವರನ್ನು ಪ್ರೋತ್ಸಾಹಿಸುವ ಔದಾರ್ಯವಿಲ್ಲ; ಔದಾರ್ಯವಿಲ್ಲದಿದ್ದರೆ ಹೋಗಲಿ ಸಹಕಾರ ಕಡೆಗೆ ಸಹಾನುಭೂತಿಯಾದರೂ ಇದೆಯೆ? ಎಂದೂ ಇತರರೊಡನೆ ಬೆರೆಯದವರು ಕೆಲವರು, ಕೈಯೆತ್ತಿ ಸಹಾಯ ಮಾಡದವರು ಮತ್ತೆ ಕೆಲವರು. ಇಂಥವರ ಮಧ್ಯದಲ್ಲೇ, ವಿಷಮ ಪರಿಸರದಲ್ಲೇ ಆದರ್ಶವಾದಿಗಳು ಕೆಲಸ ಮಾಡಬೇಕಾಗಿದೆ. ಕಾರ್ಯಕರ್ತರು ಕಳಕಳಿಯಿಂದ ದುಡಿಯುವಾಗ ಸೂಕ್ತ ಸಹಕಾರ ಪ್ರೋತ್ಸಾಹ ಸಿಗದೆ ಇದ್ದಾಗ ಮನಸ್ಸು ಮುದುಡುವುದು ಸಹಜ. ಆದರೆ ಹಾಗೆ ಮಾಡಿಕೊಂಡು ಸುಮ್ಮನಾದರೆ ಇನ್ನಷ್ಟು ಶಿಥಿಲತೆ ಉಂಟಾಗುವುದು. ಆದ್ದರಿಂದ ಶರಣ ಬಂಧುಗಳು ಕೆಲವೊಮ್ಮೆ ತಮಗೆ ತಾವೇ ಸಮಾಧಾನ ತಂದುಕೊಂಡು, ಧೈರ್ಯ ಹೇಳಿಕೊಂಡು ಮುಂದುವರಿಯಬೇಕು.

ಸಹಕಾರ್ಯಕರ್ತರು ಪರಸ್ಪರ ಸಂತೈಸಿ ಕೊಳ್ಳುತ್ತ ಮುಂದೆ ಸಾಗಬೇಕು. ವೈಯಕ್ತಿಕವಾಗಿ ಇದ್ದುಕೊಂಡು, ಸಾಧನೆ ಮಾಡುತ್ತ, ಶಾಂತಿ-ನೆಮ್ಮದಿಗಳಿಂದ ಬಾಳುವುದು ಕಡಿಮೆ ಶ್ರಮದಾಯಕ; ಸಮಾಜವನ್ನು ಜೊತೆಗೆ ತೆಗೆದುಕೊಂಡು ಅಥವಾ ಸಮಾಜದ ಮಧ್ಯೆ ತಾನಿದ್ದುಕೊಂಡು, ಅದರ ಹಿತಚಿಂತನೆ ಬಯಸುತ್ತ ಮುಂದೆ ಸಾಗುವುದು ತೀರಾ ಶ್ರಮದಾಯಕ.

ಜಾತೀಯ ಸಂಘಟನೆಗಳನ್ನು ಕಟ್ಟಿ-ಬೆಳೆಸುವುದು ತುಂಬಾ ಸುಲಭವಾದ ಕೆಲಸ. ಇಂಗ್ಲೀಷಿನಲ್ಲಿ ಒಂದು ಉಕ್ತಿ ಇದೆ. Blood is thicker than Water ಎಂದು. 'ರಕ್ತ' ಜಾತಿ, ಕುಲ ಸೂಚಕ, ನೀರು (ಅಂದರೆ ಗುರು ದೀಕ್ಷಾ ಸಮಯದಲ್ಲಿ ಸಿಂಪಡಿಸುವ ತೀರ್ಥ) ಧರ್ಮಸೂಚಕ, ಜಾತಿಯ ಪ್ರಚೋದನೆಗೆ ಈಡಾದಷ್ಟು ಮನುಷ್ಯನ ದುರ್ಬಲ ಮನ ಧರ್ಮದ ಆಕರ್ಷಣೆಗೆ ಒಳಗಾಗುವುದಿಲ್ಲ. ಆದರೇನಂತೆ, ಜಾತಿ ಸಂಘಟನೆ ಪಾರ್ಥೇನಿಯಮ್ ಗಿಡಗಳಂತೆ ಅಲರ್ಜಿದಾಯಕ, ಧರ್ಮವು ತೆಂಗಿನಗಿಡದಂತೆ ಕಲ್ಪವೃಕ್ಷ. ಬೇಕಾದರೆ ಜಾತಿ ಸಂಘಟನೆಯನ್ನು ಸೆರೆ-ಸಿಂದಿಗೂ ಹೋಲಿಸಬಹುದು. ಪ್ರಾಜ್ಞರು, ಬಸವ ಭಕ್ತರು ಎಂದೂ ಎಚ್ಚರ ತಪ್ಪುವಂತಿಲ್ಲ, ಉದಾತ್ತ ಮೌಲ್ಯಗಳಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳುವಂತಿಲ್ಲ; ಆದ್ದರಿಂದ ಆದರ್ಶ ಮೌಲ್ಯಗಳ ಪ್ರಚಾರದಲ್ಲಿ ವ್ಯಕ್ತಿಗಳು (ಕಾರ್ಯಕರ್ತರು) ಪಡುವ ನೋವು ಶಾಶ್ವತವಲ್ಲ; ನಂತರ ಅದರ ಫಲ ಶಾಶ್ವತ. ತಾತ್ಕಾಲಿಕವಾಗಿ ಜನರು ಮನ್ನಿಸಲಿ, ಮನ್ನಿಸದೆ ಇರಲಿ, ನಂತರದ ಜಗತ್ತಾದರೂ ಆದರ್ಶ ಜೀವಿಗಳನ್ನು ಅರಿತು ಕೊಂಡಾಡದೇ ಇರದು.

ಇದನ್ನೆಲ್ಲ ಚಿಂತನೆ ಮಾಡುತ್ತ ತಾವೆಲ್ಲರೂ ಸ್ವಯಂ ಸ್ಫೂರ್ತಿ, ಸ್ವಯಂ ಪ್ರೀತಿಯಿಂದ ಗಣ ಸಮಾವೇಶಗಳಲ್ಲಿ ಭಾಗವಹಿಸಬೇಕು ಮತ್ತು ಉತ್ಸಾಹ ಪ್ರೀತಿಯಿಂದ ಧರ್ಮ ಬಂಧುಗಳನ್ನು ಕರೆತರಬೇಕೆಂದು ನಿರೀಕ್ಷಿಸುವೆವು.

-ಮಾತಾಜಿ

ಬಸವ (ಲಿಂಗಾಯತ) ಧರ್ಮದ ಷಟ್‌ಸೂತ್ರ ಘೋಷಣೆ

೧.	ನಮ್ಮ ಧರ್ಮಗುರು	-	ವಿಶ್ವಗುರು ಬಸವಣ್ಣ
೨.	ನಮ್ಮ ಧರ್ಮಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
೩.	ನಮ್ಮ ಧರ್ಮಲಾಂಛನ	-	ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
೪.	ನಮ್ಮ ಧರ್ಮಕ್ಷೇತ್ರ	-	ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ
೫.	ನಮ್ಮ ಧರ್ಮಧ್ವಜ	-	ಷಟ್ಕೋನ ಸಹಿತ ಬಸವ ಧ್ವಜ
೬.	ನಮ್ಮ ಧರ್ಮದ ಧ್ಯೇಯ	-	ಜಾತಿ ವರ್ಣವರ್ಗ ರಹಿತ ಧರ್ಮ ಸಹಿತ ಕಲ್ಯಾಣರಾಜ್ಯ ನಿರ್ಮಾಣ

ಮುಖ್ಯ ಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡರ ನಿಲುವನ್ನು ಪ್ರತಿಭಟಿಸುವುದು ಅನಿವಾರ್ಯ

-ಜಗದ್ಗುರು ಮಾತೆ ಮಹಾದೇವಿ

ಶರಣ ಬಂಧುಗಳೇ,

ಈ ಸಂಬೋಧನೆಯು ಜಾತಿ ಮತ ಪಂಥ ಧರ್ಮಾತೀತವಾಗಿ ಕೆಲವೊಂದು ಮೌಲ್ಯಗಳಿಗೆ ಬದ್ಧರಾದ ಎಲ್ಲರನ್ನೂ ಒಳಗೊಳ್ಳುತ್ತದೆ. ಸಮಾನತೆ, ಸಹೋದರತ್ವ, ಸ್ವತಂತ್ರ್ಯ ಮುಂತಾದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬದ್ಧರಾದ ಎಲ್ಲರಿಗೂ ಅನ್ವಯವಾಗುತ್ತದೆ.

ಕರ್ನಾಟಕದ ಶಾಸನ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಬಿ.ಎಸ್. ಎಡೆಯೂರಪ್ಪನವರು ಕಲಬುರ್ಗಿಯಲ್ಲಿ ರೂಪುಗೊಂಡ ವಿಶ್ವವಿದ್ಯಾಲಯಕ್ಕೆ ಹನ್ನೆರಡನೆಯ ಶತಮಾನದ ಶ್ರೇಷ್ಠ ಸಮಾಜ ಸುಧಾರಕ, ಸ್ವತಂತ್ರ ವಿಚಾರವಾದಿ, ದೀನ-ದಲಿತೋದ್ಧಾರಕ, ಸಮತಾವಾದಿ ಬಸವಣ್ಣನವರ ಹೆಸರಿಡಬೇಕೆಂದು ಸೂಚಿಸಿ ವಿಷಯವನ್ನು ಪ್ರಸ್ತಾಪಿಸಿದರು. ಇದಕ್ಕೆ, ಯಾರದ್ದಾದರೂ ವಿರೋಧವಿದೆಯೇ? ಇದ್ದರೆ ಏಕೆ? ಎಂದು ಕೇಳಿದಾಗ ಇಡೀ ಶಾಸನ ಸಭೆಯ ಓರ್ವ ವ್ಯಕ್ತಿಯು ಸಹ ಭಿನ್ನಾಭಿಪ್ರಾಯ ವ್ಯಕ್ತಪಡಿಸಲಿಲ್ಲ. ಹೈದರಾಬಾದ ಕರ್ನಾಟಕದ ಪ್ರಮುಖದಲಿತ ಮುಖಂಡರಾದ ಶ್ರೀಯುತ ಮಲ್ಲಿಕಾರ್ಜುನ ಖರ್ಗೆಯವರು ಸಹಿತ ವಿರೋಧ ವ್ಯಕ್ತಪಡಿಸಲಿಲ್ಲ. (ಏಕೆಂದರೆ ಬಸವಣ್ಣನವರ ಹೆಸರಿಡಲು ಶ್ರೀ ಮಲ್ಲಿಕಾರ್ಜುನ ಖರ್ಗೆಯವರದೇ ಪ್ರಮುಖ ವಿರೋಧ ಎಂದು ಸುಳ್ಳು ಸುದ್ದಿ ಹರಡಲಾಗಿದೆ. ವಿಚಾರ ಶೀಲರು, ಸಮತಾವಾದದ ಪ್ರತಿಪಾದಕರಾದ ಶ್ರೀ ಖರ್ಗೆಯವರು ಬಸವಣ್ಣನವರನ್ನು ವಿರೋಧಿಸುತ್ತಾರೆಂಬುದನ್ನು ಪ್ರಜ್ಞಾವಂತರಾರೂ ಊಹಿಸಲು ಸಾಧ್ಯವಿಲ್ಲ) ಮಾತ್ರವಲ್ಲ ಹರ್ಷದಿಂದ ಶಾಸಕರು ಮೇಜು ಕುಟ್ಟಿ ಸ್ವಾಗತಿಸಿದರು. ವಿಶ್ವಗುರು ಬಸವಣ್ಣನವರು ವರ್ಣಾಂತರ ವಿವಾಹದ ನೇತೃತ್ವ ವಹಿಸಿದ್ದಕ್ಕಾಗಿ ಗಡಿಪಾರು ಹೊಂದಿ; ಕಲ್ಯಾಣದಿಂದ ನಿರ್ಗಮಿಸಿದುದು ಫಾಲ್ಗುಣ ಮಾಸದ ದ್ವಾದಶಿಯಂದು, ಸರಿಯಾಗಿ 800 ವರ್ಷಗಳ ನಂತರ ಅವರು ವಿಧಾನ ಸಭೆ-ವಿಧಾನ ಪರಿಷತ್ತನ್ನು ವಾಙ್ಮಯ ಶರೀರಿಯಾಗಿ ಪ್ರವೇಶಿಸಿದ್ದು, ಗೌರವ ಪಡೆದುದು ಬಹಳ ದೈವಿಕ ಸಂಕೇತ ಹೊಂದಿದೆ. (ಲೋಕಸಭಾ ಉಪಾಧ್ಯಕ್ಷ ಶ್ರೀ ಮಲ್ಲಿಕಾರ್ಜುನಯ್ಯನವರು ಮತ್ತಿತರ ವಿಚಾರಶೀಲರ ಪ್ರಯತ್ನದಿಂದಾಗಿ ವಿಶ್ವಗುರು ಬಸವಣ್ಣನವರು ಭಾವಚಿತ್ರ ಮತ್ತು ಪುತ್ಥಳಿಯಾಗಿ ಲೋಕಸಭೆಯನ್ನು ಪ್ರವೇಶಿಸುತ್ತಿರುವುದು ನಮಗೆ ಅಪಾರ ಸಂತೋಷ ಉಂಟು ಮಾಡುವಂತಹ ಪ್ರಸಂಗ).

ಶಾಸಕರ ಏಕಾಭಿಪ್ರಾಯ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ಹೆಸರನ್ನಿಡಲೇಬೇಕೆಂಬ ಜನತಾ ಪ್ರತಿನಿಧಿಗಳ ಆಗ್ರಹವನ್ನು ಗಮನಿಸಿದ ಅಂದಿನ, ಸರ್ಕಾರದ

ಪ್ರತಿನಿಧಿಯೂ, ಸಭಾ ನಾಯಕರೂ ಆಗಿದ್ದ ಉಪಮುಖ್ಯಮಂತ್ರಿ ಜೆ.ಹೆಚ್. ಪಟೇಲರು ಶಾಸಕರೆಲ್ಲರ ಅಭಿಪ್ರಾಯವು ಇದೇ ಆಗಿದ್ದರೆ ತಾವೂ ಅದನ್ನು ಮನ್ನಿಸುವುದಾಗಿ ಹೇಳಿದರು. ಮತ್ತು ಈಗಿಂದೀಗಲೇ ಜಾರಿಗೆ ತರುವುದಾಗಿ ಸರ್ಕಾರದ ಪರವಾಗಿ ಘೋಷಿಸಿದರು. ಎಲ್ಲರಿಗೂ ಸರಿ ಎನ್ನಿಸಿದ ಈ ಅಭಿಪ್ರಾಯದಿಂದ ಶ್ರೀ ಪಟೇಲರ ಬಗ್ಗೆ ಗೌರವವೂ ಉಂಟಾಯಿತು. ಈ ಪ್ರಸಂಗದ ನಂತರ ಶ್ರೀ ಬಸವರಾಜ ಪಾಟೀಲ ಅಟ್ಟೂರ್, ಬಸವ ಕಲ್ಯಾಣದ ಶಾಸಕರು, ಶ್ರೀ ಎನ್. ತಿಪ್ಪಣ್ಣ ಎಂ.ಎಲ್.ಸಿ. ಮುಂತಾದ ಅನೇಕರು ರಾಷ್ಟ್ರೀಯ ಬಸವ ದಳದ ಚಳುವಳಿಗಾರರನ್ನು ಕಂಡು, ಮಾತನಾಡಿಸಿ, ಅಭಿನಂದಿಸಿ ಚಳುವಳಿ ಸ್ಥಗಿತಗೊಳಿಸಲು ವಿನಂತಿ ಮಾಡಿಕೊಂಡರು. ಈ ಹಿಂದೆ ಶ್ರೀ ವೀರಪ್ಪ ಮೊಯಿಲಿಯವರಿಂದ ಮಹಾಚೈತ್ರ ರದ್ಧತಿ ವಿಷಯದಲ್ಲಿ ಭಾರಿ ಸುಳ್ಳು ಚಲಾವಣೆಯಾದುದರಿಂದ, ಚಳುವಳಿಗಾರರು ಉಪವಾಸ ಸತ್ಯಾಗ್ರಹ ನಿಲ್ಲಿಸಲು ಸಿದ್ಧರಿರಲಿಲ್ಲ. ಸರ್ಕಾರಿ ಆದೇಶ ಪತ್ರವನ್ನು ವಿತರಿಸುವವರೆಗೂ ಒಪ್ಪುವುದಿಲ್ಲವಾಗಿ ಸ್ಪಷ್ಟಪಡಿಸಿದರು. ಆದರೆ ಜನತಾ ದಳದ ಅನೇಕ ಸಚಿವರು, ಶಾಸಕರು, ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರ ಮನವೊಲಿಸಿ, ನಮ್ಮನ್ನು ನಂಬಿ, ನಮಗೂ ಕಳಕಳಿ ಇದೆ. ಶಾಸನ ಸಭೆಯ ಬಹುಮತ (ಇಲ್ಲಿ ಒಮ್ಮತ) ವನ್ನು ಯಾರಿಗೂ ಉಲ್ಲಂಘಿಸಲು ಸಾಧ್ಯವಾಗದು." ಎಂದು ಸರ್ಕಾರದ ಪರವಾಗಿ ಮಾತನಾಡಿದರು. ಹೀಗಾಗಿ ಅವರುಗಳನ್ನು ಅಭಿನಂದಿಸಿ, ಚಳುವಳಿಯನ್ನು ರಾಷ್ಟ್ರೀಯ ಬಸವ ದಳದವರು ಹಿಂತೆಗೆದುಕೊಂಡರು.

ಆದರೆ, ನಂತರ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡರ ಬಾಯಿಂದ ಆಶ್ಚರ್ಯಕರವಾದ ಹೇಳಿಕೆಯೊಂದು ಹುತ್ತದಿಂದ ಹಾವು ಹೊರಬರುವಂತೆ ಬಂದಿತು. ಅಂದು ಶಾಸನ ಸಭೆಯಲ್ಲಿ ತಾವು ಇರಲಿಲ್ಲವಾಗಿಯೂ, ಶ್ರೀ ಜೆ.ಹೆಚ್. ಪಟೇಲರು ಇದ್ದರೆಂದೂ, ಅವರದ್ದು ವೈಯಕ್ತಿಕ ಅಭಿಪ್ರಾಯವೇ ಹೊರತು ಅದು ಶಾಸನ ಸಭೆಯ ನಿರ್ಣಯವಾಗಲೀ, ಸರ್ಕಾರದ ನಿರ್ಣಯವಾಗಲೀ ಅಲ್ಲ ಎಂದು ಮಾತಿನ ಮುತ್ತುಗಳನ್ನು ಉದುರಿಸಿದರು. ಇಂಥ ಹೇಳಿಕೆ ಬಹಳ ಜನರಿಗೆ ಆಘಾತ ಮತ್ತು ಅವಮಾನವನ್ನುಂಟು ಮಾಡಿದೆ. ಮೊದಲು ಈ ಹೇಳಿಕೆಯ ವಿಶ್ಲೇಷಣೆ ಮಾಡೋಣ.

1. ಜಾತಿ ಮತ ಪಂಥ ಎಲ್ಲಕ್ಕೂ ಮಿಗಿಲಾಗಿ (ರಾಜಕೀಯ) ಪಕ್ಷ ಭೇದ ಮರೆತು ಅಧಿಕಾರಾರೂಢ ಪಕ್ಷ ಮತ್ತು ವಿರೋಧ ಪಕ್ಷಗಳವರು ಸೇರಿ ಒಮ್ಮತದ ಅಭಿಪ್ರಾಯ ಕೊಟ್ಟುದು ಪ್ರಜಾ ಪ್ರಭುತ್ವದಲ್ಲಿ ಅತ್ಯಂತ ಮಹತ್ವಪೂರ್ಣವಲ್ಲವೆ? ಯಾವುದೇ ಚರ್ಚೆಯಿಲ್ಲದೆ, ಅಪಸ್ವರವಿಲ್ಲದೆ, ವಿರೋಧವಿಲ್ಲದೆ ಏಕಾಭಿಪ್ರಾಯವನ್ನು ಮೇಲ್ಮನೆ, ಕೆಳಮನೆ ಎರಡೂ ವ್ಯಕ್ತಪಡಿಸಿದುದು ನಿಜಕ್ಕೂ ಚರಿತ್ರಾರ್ಹ ಘಟನೆ. ವ್ಯಕ್ತಿ ಎಷ್ಟೇ ದೊಡ್ಡವರಿರಲಿ, ವ್ಯಕ್ತಿಗಿಂತ ಸಮುದಾಯ ದೊಡ್ಡದು. ಇದೇ ಪ್ರಜಾಪ್ರಭುತ್ವದ ಜೀವಾಳವಲ್ಲವೆ? ಅಂದಾಗ ನಿರ್ಣಯ ತೆಗೆದುಕೊಳ್ಳಲಿಕ್ಕೆ ರಾಜಮಾರ್ಗವನ್ನು ವಿಧಾನ ಪರಿಷತ್ತು-ವಿಧಾನ ಸಭೆಗಳು ಕಲ್ಪಿಸಿಕೊಟ್ಟಾಗ ಇನ್ನು ಕೇವಲ ಸಚಿವ ಸಂಪುಟದ

ಸಭೆಯಲ್ಲಿಟ್ಟು ನಿರ್ಧರಿಸಿ ಸರ್ಕಾರದ ಆದೇಶವನ್ನಾಗಿ ರೂಪುಗೊಳಿಸಬೇಕಾದಾಗ ಮುಖ್ಯಮಂತ್ರಿಗಳು ವಿಳಂಬ ನೀತಿ ಅನುಸರಿಸಿದ್ದು ಮಾತ್ರವಲ್ಲದೆ ಪ್ರಜಾಪ್ರಭುತ್ವವನ್ನೇ ಅಣಕಿಸುವ ರೀತಿಯಲ್ಲಿ ಹೇಳಿಕೆ ಕೊಟ್ಟುದು ಸರಿಯೆ?

2. ಅಂದು ದೇವೇಗೌಡರು ಸಭೆಯಲ್ಲಿರಲಿಲ್ಲ. ವಿಧಾನ ಸಭೆಗೆ ಅಥವಾ ರಾಜ್ಯದ ಆಗುಹೋಗುಗಳ ಕಡೆಗೆ ಗಮನ ಕೊಡಲು ಮುಖ್ಯ ಮಂತ್ರಿಗಳಿಗೆ ಪುರುಷೋತ್ತಾದರೂ ಎಲ್ಲಿದೆ? ನಾಮಕರಣ, ಮದುವೆ ಸಮಾರಂಭ, ಜಾತಿ ಸಮ್ಮೇಳನಗಳು ಹೇರಳವಾಗಿ ನಡೆಯುತ್ತಿರುವಾಗ ತಮ್ಮ ಹಿಂಬಾಲಕರಾದ ಸಚಿವರು, ಶಾಸಕರು ಏರ್ಪಡಿಸುವ ಅಂಥ ಕಾರ್ಯಕ್ರಮಗಳಿಗೆ ಹೆಲಿಕಾಪ್ಟರಿನಲ್ಲಿ ಸರ್ಕಾರಿ ವೆಚ್ಚದಲ್ಲಿ ಹಾರಾಡುವ ಮುಖ್ಯಮಂತ್ರಿಗಳಿಗೆ ರಾಜ್ಯದ ಬಗ್ಗೆ ಅಥವಾ ಜನತೆಯ ಬೇಡಿಕೆ ಕುರಿತು ಚಿಂತಿಸಲು, ಸ್ಪಂದಿಸಲು ಪುರುಷೊತ್ತು ಎಲ್ಲಿರಬೇಕು? ಒಂದೇ ದಿವಸ 32 ಕಾರ್ಯಕ್ರಮಗಳಲ್ಲಿ 'ಇಣುಕಿ' ಹೋಗಿ ಒಂದು ದಾಖಲೆಯನ್ನೇ ನಿರ್ಮಾಣ ಮಾಡುತ್ತಿರುವಾಗ ಎಲ್ಲ ನಿರ್ಣಯಗಳು ಇವರ ಉಪಸ್ಥಿತಿಯಲ್ಲೇ ಆಗಬೇಕೆಂದರೆ ಸಾಧ್ಯವೆ? ಆಗಬೇಕು ಎಂಬುದು ಸಾಧುವೆ?

3. ಶ್ರೀ ಜೆ.ಹೆಚ್. ಪಟೇಲರು ಕಾಕತಾಳೀಯ ನ್ಯಾಯದಂತೆ ಅಂದು ವಿಧಾನ ಸಭೆಯಲ್ಲಿ ಸರ್ಕಾರಿ ಪ್ರತಿನಿಧಿಗಳು, ಸಭಾ ನಾಯಕರು ಆಗಿದ್ದರು. ಪ್ರಜಾ ಪ್ರತಿನಿಧಿಗಳಿಂದ ಒತ್ತಡವು ಬಂದಿತು. ಎಲ್ಲರ ಕೊರಳೂ ಒಂದಾದಾಗ ಪ್ರಜಾಪ್ರಭುತ್ವದ ನೇಮದಂತೆ ಶ್ರೀ ಪಟೇಲರು ನಿಮ್ಮೆಲ್ಲರ ಅಭಿಪ್ರಾಯವೂ ಅದೇ ಆಗಿದ್ದಾಗ ನಾನೂ ಅದನ್ನೂ ಮಾನ್ಯ ಮಾಡುತ್ತೇನೆ ಎಂದರು. ಮತ್ತು ತಕ್ಷಣವೇ ಜಾರಿಗೆ ಬರುವಂತೆ ನಾಮಕರಣ ಮಾಡಲಾಗುವುದು ಎಂದು ಪ್ರಜಾಪ್ರತಿನಿಧಿಗಳ ಜಯಘೋಷದ ಮಧ್ಯೆ ಘೋಷಿಸಿದರು.

ಇದನ್ನು ಅವರ (ಶ್ರೀ ಪಟೇಲರ) ವೈಯಕ್ತಿಕ ಅಭಿಪ್ರಾಯವೆಂದು ಶಾಸನ ಸಭೆಯ ನಿರ್ಣಯ ಅಲ್ಲವೆಂದು ಶ್ರೀ ದೇವೇಗೌಡರು ಧಾರ್ಷ್ಟ್ಯದ ಹೇಳಿಕೆ ನೀಡಿ ಶಾಸನ ಸಭೆಗೆ ಅವಮಾನ ಮಾಡಿದ್ದಾರೆ.

ಒಂದು ವಿಶಿಷ್ಟ ಸ್ಥಾನದಲ್ಲಿ ಯಾರೇ ಇರಲಿ, ಸಭಾ ನಿರ್ವಹಣೆ ಮಾಡುವಾಗ ಅವರು ವ್ಯಕ್ತಿಯಾಗಿ ಅಲ್ಲ ಪ್ರತಿನಿಧಿಯಾಗಿ ಕೆಲಸ ಮಾಡುತ್ತಾರೆ. ಅಂದಾಗ ಅಂದು ಪಟೇಲರು ತಮ್ಮ ವೈಯಕ್ತಿಕ ವ್ಯಾಪ್ತಿಯಲ್ಲಿ ಕೆಲಸ ಮಾಡದೆ ಸರ್ಕಾರದ ಪ್ರತಿನಿಧಿಯಾಗಿ ಕೆಲಸ ಮಾಡಿದ್ದಾರೆ ಎಂದಾಗ ಅವರ ಮಾತಿಗೆ, ನಿರ್ಣಯಕ್ಕೆ, ನಡಾವಳಿಗೆ, ಯಾವ ಕಾಸಿನ ಬೆಲೆಯೂ ಇಲ್ಲವೆ?

ಇದು ಅತ್ತೆ-ಸೊಸೆಯರ ನ್ಯಾಯದಂತೆ ಆಗಿದೆ. ಒಮ್ಮೆ ಓರ್ವ ಅತ್ತೆ ಸುದ್ದಿ ಸೂರಾಡಲು ಮನೆಮನೆಗೆ ಹೋಗಿದ್ದಳು. ಅವರ ಮನೆಯಲ್ಲಿ ಮಜ್ಜಿಗೆಯನ್ನು ದಾನ ಮಾಡುವ

ಪದ್ಧತಿ ಇತ್ತು. ಅಂದು ಮಜ್ಜಿಗೆ ಕೇಳಲು ಬಂದ ಓರ್ವ ಮಹಿಳೆಗೆ ಇಂದು ನಮ್ಮ ಮನೆಯಲ್ಲಿ ಮಜ್ಜಿಗೆ ಇಲ್ಲ. ಏಕೆಂದರೆ ನಿನ್ನೆ ಕರು ಹಾಲನ್ನೆಲ್ಲ ಕದ್ದು ಕುಡಿದಿದೆ ಹೀಗಾಗಿ ಇಂದು ಮಜ್ಜಿಗೆ ಮಾಡಿಲ್ಲ." ಎಂದು ಸೊಸೆ ಹೇಳಿದಳು. ಆಗ ಆ ಮಹಿಳೆ ವಾಪಸ್ಸು ಹೊರಟಳು. ಓಣಿ ದಾಟುವಷ್ಟರಲ್ಲಿ ಅತ್ತೆ ಇದಿರಾಗಿ ವಿಷಯ ತಿಳಿದಳು". ನನ್ನ ಸೊಸೆ ಹಾಗೆಂದಳೆ? ಬಾ ಇಲ್ಲಿ" ಎಂದು ಆ ಮಹಿಳೆಯನ್ನು ಕರೆದೊಯ್ದಳು ಆಗ ಆ ಮಹಿಳೆ ಆಲೋಚಿಸಿದಳು. ಆ ಸೊಸೆ ಎಷ್ಟು ಕೆಟ್ಟವಳು ಈ ಅತ್ತೆ ಎಷ್ಟು ಒಳ್ಳೆಯವಳು. ಮನೆಯಲ್ಲಿ ಮಜ್ಜಿಗೆ ಇಟ್ಟುಕೊಂಡೂ ಸಹ ವಾಪಸ್ಸು ಕಳಿಸಿದಳು, ಎಂದು ಅತ್ತೆಯನ್ನು ಹಿಂಬಾಲಿಸಿದಳು. ಮನೆಯೊಳಗೆ ಉಭಯತರೂ ಹೋದರು ನಡುಮನೆಗೆ ಹೋದಾಗ ಅತ್ತೆ ಹೇಳಿದಳು, "ನಮ್ಮ ಮನೆಯಲ್ಲಿ ಇಂದು ಮಜ್ಜಿಗೆ ಮಾಡಿಲ್ಲ, ನಿನ್ನೆ ಕರುವು ಹಾಲನ್ನೆಲ್ಲ ಕುಡಿಯಿತು. "ಅಯ್ಯೋ ಇದನ್ನು ಹೇಳಲು ಇಲ್ಲಿಗೇಕೆ ಕರೆತಂದಿರಿ. ಈ ಮಾತನ್ನು ನಿಮ್ಮ ಸೊಸೆ ಮೊದಲೇ ಹೇಳಿದ್ದರು. "ಆಗ ಆ ಅತ್ತೆ ಹೇಳಿದಳು, "ಮಜ್ಜಿಗೆ ಇಲ್ಲ ಎಂದು ಹೇಳಲು ಆಕೆಗೆ ಏನು ಅಧಿಕಾರ? ಅದಕ್ಕೆ ನಿನ್ನನ್ನು ಇಲ್ಲಿಗೆ ಕರೆತಂದು ಹೇಳಿದೆ". ಇಂಥ ಅತ್ತೆಯ ದರ್ಪ ಕುಟುಂಬ ವಲಯದಲ್ಲಿ ನಡೆಯಬಹುದೇ ವಿನಾ ಪ್ರಜಾಪ್ರಭುತ್ವದಲ್ಲಿ ಶಾಸನ ಸಭೆಯಲ್ಲಿ ಅಲ್ಲ.

4. ಶ್ರೀ ದೇವೇಗೌಡರ ಇಂಥ ಹೇಳಿಕೆ ಅವರಲ್ಲಿರುವ ಸರ್ವಾಧಿಕಾರಿ ಪ್ರವೃತ್ತಿಯನ್ನು, ಬೇರೆಯಾರ ಆತ್ಮಗೌರವಕ್ಕೂ ಅವರು ಬೆಲೆ ಕೊಡುವುದಿಲ್ಲವೆಂಬುದನ್ನು, ಏಕಚಕ್ರಾಧಿಪತ್ಯವನ್ನು ಅವರು ಸ್ಥಾಪಿಸಲು ಬಯಸಿರುವರೆಂಬುದನ್ನು, ಶಂಖದಿಂದ ಬಂದುದು ತೀರ್ಥ ಎಂಬಂತೆ ತಾವು ಹೇಳಿದ್ದು ಮಾತ್ರ ನಿರ್ಣಯ ಎಂಬ ಧೋರಣೆಯನ್ನು ತಳೆದಿರುವರೆಂಬುದನ್ನು ದೃಢಪಡಿಸುತ್ತದೆ.

ಈ ಹೇಳಿಕೆ ಶಾಸನ ಸಭೆ, ಶಾಸಕರ ಆತ್ಮಗೌರವಕ್ಕೆ ಚ್ಯುತಿ ತಂದಿದೆ. ಜೆ.ಹೆಚ್. ಪಟೇಲರ ಮಾತಿಗೆ ಯಾವ ಬೆಲೆಯೂ ಇಲ್ಲವೆಂಬುದನ್ನು ಎತ್ತಿ ತೋರಿಸುತ್ತಿದೆ. ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಸಮತಾವಾದಿ, ಮಾನವತಾವಾದಿ ಬಸವಣ್ಣನವರಿಗೆ ಅಪಾರ ಅಗೌರವವನ್ನು ಉಂಟು ಮಾಡಿದೆ. ತನ್ಮೂಲಕ ಒಂದು ಬೃಹತ್ ಸಮಾಜವಾದ ಲಿಂಗಾಯತ ಸಮಾಜದ ಮತದಾರರಿಗೆ ಶ್ರೀ ದೇವೇಗೌಡರು ಯಾವ ಬೆಲೆಯನ್ನು ಕೊಡುವುದಿಲ್ಲ ಎಂಬುದನ್ನು ದೃಢಪಡಿಸಿದೆ. ಶ್ರೀ ದೇವೇಗೌಡರ ಆಡಳಿತ ವೈಖರಿಯಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರಂಥ ಸೌಜನ್ಯಶೀಲ ಪ್ರೌಢ ರಾಜಕಾರಣ ಮುತ್ಸದ್ದಿಗಳಿಗೆ ಇರುವ ಸ್ಥಾನ ಅಗಣ್ಯ ಎಂಬುದು ಗೋಚರವಾಗುತ್ತದೆ. ತನ್ನ ಉಪಮುಖ್ಯ ಮಂತ್ರಿಯಾದ ವ್ಯಕ್ತಿಯ ಸ್ಥಾನಗೌರವವನ್ನು ಕಾಯಬೇಕೆಂಬ ಶಿಷ್ಟಾಚಾರ ಸಂಹಿತೆಯಂತೂ ಸ್ವಲ್ಪವೂ ಮುಖ್ಯಮಂತ್ರಿಗಳಲ್ಲಿ ಇದ್ದಂತೆ ತೋರದು. ಸ್ವಾಭಿಮಾನ ಎಲ್ಲಕ್ಕಿಂತಲೂ ಹೆಚ್ಚಿನ ನಿಧಿ. ಅಧಿಕಾರಕ್ಕೆ ಅಂಟಿಕೊಂಡು ಒಂದು ಸ್ಥಾನ ಸಿಕ್ಕದೆಯಲ್ಲಾ ಎಂದು ಶ್ರೀ ದೇವೇಗೌಡರ ಏಕಚಕ್ರಾಧಿಪತ್ಯದ ಆಳ್ವಿಕೆಯಲ್ಲಿ ಶ್ರೀ ಜೆ.ಹೆಚ್. ಪಟೇಲರು ಒಳಗಮಾನ್ಯ ಪದ್ಧತಿ ಅನುಸರಿಸುವುದಕ್ಕಿಂತಲೂ ಬಹಿರಂಗ ಹೇಳಿಕೆ

ನೀಡಿ ತಮ್ಮನ್ನು ಅವಮಾನಿಸಿರುವ ಮುಖ್ಯಮಂತ್ರಿಗಳ ವಲಯದಿಂದ ರಾಜೀನಾಮೆ ಇತ್ತು ಹೊರಬರುವುದು ಅತ್ಯಂತ ಗೌರವಾರ್ಹ ಎನಿಸುವುದು. ಸರ್ಕಸ್ಸಿನಲ್ಲಿ ರಿಂಗ್ ಮಾಸ್ಟರ್ ಚಾಟಿ ತಗೊಂಡು ಪ್ರಾಣಿಗಳನ್ನು ನಿಯಂತ್ರಿಸಿದಂತೆ, ಪ್ರಜಾಪ್ರಭುತ್ವದಲ್ಲಿ ಮುಖ್ಯಮಂತ್ರಿ ತನ್ನ ಉಪಮುಖ್ಯಮಂತ್ರಿ ಮತ್ತು ಇನ್ನಿತರ ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಅಧಿಕಾರದ ಚಾಟಿ ಹಿಡಿದು ಆಡಿಸುವುದು ಸರಿಯೆ?

ವಿಳಂಬಕ್ಕೆ ಯಾರು ಕಾರಣರು?

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರಿಡಬೇಕೆಂಬ ಬೇಡಿಕೆ ಇಂದು ನಿನ್ನೆಯದಲ್ಲ. ವಿಶ್ವವಿದ್ಯಾಲಯವು ಆರಂಭವಾದ ದಿನದಿಂದಲೂ ಶುರುವಾಗಿರುವ ಬೇಡಿಕೆ ಇದು. ಮತ್ತು ಯಾರಿಗೇ ಆದರೂ ಮನದಟ್ಟಾಗುವಂತೆ ಇದು ಅತ್ಯಂತ ನ್ಯಾಯೋಚಿತವಾದ ಬೇಡಿಕೆ. ಈ ಬಗ್ಗೆ ಶತ್ರುವೂ ಸಹ ಎರಡಾಡಲಾರೆ. ಏಕೆಂದರೆ 12ನೆಯ ಶತಮಾನದಲ್ಲಿ ವಿಶ್ವವಿಖ್ಯಾತ ಅನುಭವ ಮಂಟಪವಾಗಿ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಇರುವ ಭೂಖಂಡದಿಂದೆಲ್ಲ ಅಸಂಖ್ಯಾತ ಸಾಧಕರು-ಸಿದ್ಧಪುರುಷರು ಆಗಮಿಸಿದ್ದು ಅನುಭವ ಮಂಟಪ, ಅದರ ಸಚೇತಕ ಶಕ್ತಿ ಬಸವಣ್ಣನವರಿದ್ದ ಕಲ್ಯಾಣಕ್ಕೆ. ಅಂಥ ಕಲ್ಯಾಣವು ಇಂದು ಗುಲಬರ್ಗಾ ವಿಭಾಗದಲ್ಲಿ ಬರುತ್ತಿದ್ದು, ಇದಕ್ಕೆ ಹೈದರಾಬಾದ್ ಕರ್ನಾಟಕ ಎಂಬ ಪರದಾಸ್ಯ ಸೂಚಕ ಹೆಸರಿನ ಬದಲು ಕಲ್ಯಾಣ ಕರ್ನಾಟಕ ಎಂಬ ಹೆಸರೇ ಅತ್ಯಂತ ಸೂಕ್ತ ಎನಿಸುವುದು ಹೀಗೆ ತನ್ನ ಆಡಳಿತ ಮತ್ತು ಶೈಕ್ಷಣಿಕ ವ್ಯಾಪ್ತಿಯಲ್ಲಿ ಬರುವ ಬಸವ ಕಲ್ಯಾಣವನ್ನು ಹೊಂದಿದ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂಬುದು ಅತ್ಯಂತ ಸೂಕ್ತ, ಹೀಗಾಗಿ ಈ ಬೇಡಿಕೆ ನ್ಯಾಯೋಚಿತ.

ಹೀಗಿರುವಾಗ, ಇದಕ್ಕೆ ದಲಿತರಿಂದ ವಿರೋಧವಿದೆ ಎಂಬ ಸುಳ್ಳು ಸುದ್ದಿಯೊಂದನ್ನು ಮುಖ್ಯವಾಗಿ ಸರ್ಕಾರದ ವತಿಯಿಂದಲೇ ಹರಡಲಾಗುತ್ತಿದೆ? ಎಂದರೆ ಉತ್ಪ್ರೇಕ್ಷೆ ಎನಿಸದು. ಹಿಂದೆ ವಿಶ್ವವಿದ್ಯಾಲಯ ಆರಂಭವಾದಾಗ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆಂಬ ಬೇಡಿಕೆ ಬಸವಾನುಯಾಯಿಗಳಿಂದ ಬಂದಾಗ ಡಾ|| ಅಂಬೇಡ್ಕರರ ಅನುಯಾಯಿಗಳೂ ಬೇಡಿಕೆ ಇಟ್ಟರು. ನಂತರ ಭೀಮಾ ಕೃಷ್ಣಾ ನದಿಯಲ್ಲಿ ಸಾಕಷ್ಟು ನೀರು ಹರಿಯಿತೆಂಬಂತೆ ಬದಲಾವಣೆ ಆಗಿವೆ. ಶ್ರೀ ಡಾ|| ಅಂಬೇಡ್ಕರರ ಜನ್ಮರಾಜ್ಯವಾದ ಮಹಾರಾಷ್ಟ್ರದಲ್ಲಿ ಮರಾಠವಾಡಾ ವಿಶ್ವವಿದ್ಯಾಲಯಕ್ಕೆ ಅಂಬೇಡ್ಕರರ ಹೆಸರು ಇಡಲ್ಪಟ್ಟಿತು. ಭಾರತದಲ್ಲಿ ಇನ್ನೂ 3 ವಿಶ್ವವಿದ್ಯಾಲಯಗಳಿಗೆ ಇರುವುದೇ ಅಲ್ಲದೆ ಇನ್ನೂ ಆಗಲಿರುವ ಕೆಲವಕ್ಕೆ ಹೆಸರನ್ನಿಡುವ ಬಯಕೆ ಅಲ್ಲಲ್ಲೇ ವ್ಯಕ್ತವಾಗಿದೆ. ಇದನ್ನು ಪ್ರಾಜ್ಞರಾದ ದಲಿತರು ಅರಿತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಬುದ್ಧ-ಬಸವ-ಅಂಬೇಡ್ಕರರ ಜಯಂತಿಗಳನ್ನು ದಲಿತರು ಒಟ್ಟಾಗಿ ಮಾಡುವುದೇ ಅಲ್ಲದೆ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ತ್ಯಾಗ-ಬಲಿದಾನ ಆದುದೇ ದಲಿತರ ಉದ್ಧಾರಕ್ಕಾಗಿ ಎಂಬುದನ್ನು ಅರಿತು, ಡಾ||

ಅಂಬೇಡ್ಕರರಿಗಿಂತಲೂ ಎಂಟುನೂರು ವರ್ಷ ಮೊದಲಿಗೇ ತಮ್ಮ ಹಿತಕ್ಕಾಗಿ ದುಡಿದವರು, ತಮ್ಮ ನೋವಿಗೆ ಧ್ವನಿಕೊಟ್ಟವರು ಬಸವಣ್ಣನವರು ಎಂಬುದನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ; ಹೀಗಾಗಿ ಈ ಸಲ ಬಸವಾನುಯಾಯಿಗಳು ಗಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನಿಡಬೇಕು ಎಂದು ಚಳುವಳಿ ಪ್ರಾರಂಭಿಸಿದಾಗ ದಲಿತರು ಯಾರೂ ಪ್ರತಿರೋಧ ಒಡ್ಡಿಲ್ಲ ಎಂಬುದು ಗಂಭೀರವಾಗಿ ಗಮನಾರ್ಹ.

ಆದರೆ, ಸರ್ಕಾರದಂತಹ ಹೊಣೆಗಾರಿಕೆಯುಳ್ಳ ಸಂಸ್ಥೆಯ ಮುಂಚೂಣಿಯಲ್ಲಿರುವ, ಹೊಣೆ ಹೊತ್ತವರೇ ಬೇಕಂತಲೇ ದಲಿತರು ವಿರೋಧ ಮಾಡಬಹುದು ಎಂದು ಹಲ್ಲಿ ಶಕುನ ನುಡಿಯುತ್ತ ದಲಿತರನ್ನು ಪ್ರಚೋದಿಸಲು ಯತ್ನಿಸುತ್ತಿರುವುದು ಖಂಡನಾರ್ಹ. ಸರ್ಕಾರದ ಅನೇಕ ವ್ಯಕ್ತಿಗಳ ಪ್ರಚೋದನೆ ಇದ್ದರೂ ಶಾಂತವಾಗಿಯೇ ಇದ್ದು ಅಪ್ರತ್ಯಕ್ಷವಾಗಿ ಬೆಂಬಲಿಸುತ್ತಿರುವ ದಲಿತರು ಈಗ ಅಭಿನಂದನಾರ್ಹರು. ಕೆಲವು ಸಂಘಟನೆಗಳಂತೂ, ಉದಾಹರಣೆಗೆ ಅಖಿಲ ಕರ್ನಾಟಕ ಆದಿ ಜಾಂಬವ ಸಂಘ, ಧಾರವಾಡ ಜಿಲ್ಲೆ ಇವರು ಲಿಖಿತ ಹೇಳಿಕೆ ನೀಡಿ ಬೆಂಬಲಿಸಿದ್ದಾರೆ ಮಾತ್ರವಲ್ಲ, ಸರ್ಕಾರವು ನಿರ್ಧಾರ ತೆಗೆದುಕೊಳ್ಳಲು ವಿಳಂಬ ಮಾಡಿದರೆ ನೇರವಾಗಿ ಹೋರಾಟಕ್ಕೆ ಇಳಿಯುವುದಾಗಿ ನಿರ್ಣಯ ಕೈಗೊಂಡಿದೆ.

ಗಣನೀಯ ಶಕ್ತಿಗಳಾಗಿರುವ ಲಿಂಗಾಯತ ಸಮಾಜ ಮತ್ತು ದಲಿತ ಸಮಾಜ ಒಟ್ಟುಗೂಡಬಾರದು, ಉಭಯತರು ವೈಷಮ್ಯದಿಂದ ಇರಲಿ ಎಂಬ ಆಶಯ ಒಡೆದು ಆಳುವ ನೀತಿಯುಳ್ಳ ರಾಜಕಾರಣಿಗಳದ್ದು. ಅದಕ್ಕಾಗಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರಿಟ್ಟರೆ ದಲಿತರು ಸರ್ಕಾರದ ವಿರೋಧಿಗಳಾಗುವರು ಎಂಬ ಭುಗಿಲು, ದಿಗಿಲು ಎಬ್ಬಿಸಲು ಕೆಲವು ಸಚಿವರು ಯತ್ನಿಸುತ್ತಿದ್ದಾರೆ. ಈ (ಕು) ತಂತ್ರವನ್ನು ಇಂದು ಲಿಂಗಾಯತ ಮತ್ತು ದಲಿತ ಮುಖಂಡರು ಉಭಯತರೂ ಅರಿಯವುದು ಬಹಳ ಅಗತ್ಯವಿದೆ.

ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ನೋಡಿದರೆ ದಲಿತರು ವಿರುದ್ಧವಾಗುವರು ಎಂಬ ಗಾಳಿ ಸುದ್ದಿ ಪರಡಿ, ನಾಮಕರಣ ಕ್ರಿಯೆಯನ್ನು ಶಾಸನ ಸಭೆ-ಪ್ರಜಾಪ್ರತಿನಿಧಿಗಳ ಅಭಿಪ್ರಾಯವನ್ನು ಧಿಕ್ಕರಿಸಿ, ವಿಳಂಬಗೊಳಿಸುವಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಕೆಲವು ವೀರಶೈವ ಸಲಹೆಗಾರರು ಮುಖ್ಯ ಕಾರಣರು ಎಂದು ಹೇಳದೆ ಗತ್ಯಂತರವಿಲ್ಲ. ಶ್ರೀ ದೇವೇಗೌಡರನ್ನು ರಾಹು-ಕೇತುಗಳಂತೆ ಆವರಿಸುವ ಕೆಲವು ವೀರಶೈವ ಸಚಿವರು, ಇಂದು ಬಸವಣ್ಣನವರನ್ನು ಕಾಡಲು ಕೊಂಡಿ ಮಂಚಣ್ಣ, ನಾರಾಯಣ ಕ್ರಮಿತರ ಸಂತತಿಯಾಗಿಯೇ ಉಳಿದಿದ್ದಾರೆ ಎನ್ನಿಸದಿರದು. ಮಹಾಚೈತ್ರದಂತಹ ಒಂದು ಕೆಟ್ಟಪುಸ್ತಕವನ್ನು ಉಳಿಸಿಕೊಳ್ಳಲು ಅಹರ್ನಿಶೆ ಪ್ರಯತ್ನ ಮಾಡಿದ ಮಹಾನುಭಾವರೇ ಇಂದೂ ಸಹ ಶ್ರೀ ದೇವೇಗೌಡರಿಗೆ ತಪ್ಪು ಸಲಹೆ ನೀಡುತ್ತಿರಬಹುದು ಎಂದು ಊಹಿಸಲು ವಿಪುಲ ಅವಕಾಶವಿದೆ. ಆದರೆ ಜನತಾ ಪ್ರತಿನಿಧಿಗಳಾದ ಮುಖ್ಯಮಂತ್ರಿಗಳು ಅಂಥ ಆಚಾರ್ಯಪರ ವೀರಶೈವ ವಾದಿಗಳನ್ನಷ್ಟೆ ತಮ್ಮ ಹಿತಚಿಂತಕರನ್ನಾಗಿ ಭಾವಿಸದೆ ಪ್ರಗತಿಪರ ಚಿಂತಕರಾದ ಬಸವಾನುಯಾಯಿ ಸಚಿವರಿಗೆ ಮಾನ್ಯತೆ ನೀಡಿ ತಮ್ಮ ಆತ್ಮೀಯ ವಲಯದಲ್ಲಿ ಇರಿಸಿ ಕೊಳ್ಳುವುದು ಶ್ರೇಯಸ್ಕರ. ಬಿಜ್ಜಳ

ಮಹಾರಾಜ ಅಂದು ಬಸವಣ್ಣನವರನ್ನು ನೇರವಾಗಿ ಬೆಂಬಲಿಸಿದ್ದರೆ ಆತ ಕರ್ನಾಟಕ ಚರಿತ್ರೆಯ ಪುಟಗಳಲ್ಲಿ ಅತ್ಯಂತ ಕ್ರಾಂತಿಕಾರಿ ರಾಜನಾಗಿರುತ್ತಿದ್ದ. ಬಸವಣ್ಣನವರನ್ನು ಬಿಟ್ಟುಕೊಂಡೆಯ ಮಂಚಣ್ಣ-ನಾರಣ ಕ್ರಮಿತರ ಪ್ರಭಾವಕ್ಕೆ ಸಿಕ್ಕಿಬಿದ್ದು ವಿಪತ್ತುಗಳಿಗೆ ಆಹ್ವಾನ ನೀಡಿದ. ಶ್ರೀ ದೇವೇಗೌಡರು ಸಹ ಬಸವ ವಿರೋಧಿಗಳಾದ ಕೆಲವು ಸಚಿವರ ಅಷ್ಟಪದಿ ಹಿಡಿತಕ್ಕೆ ಸಿಕ್ಕಿ ಸತ್ಯಕ್ಕೆ, ನ್ಯಾಯಯುತ ಬೇಡಿಕೆಗೆ ಅಪಚಾರ ಮಾಡುವುದು ಬೇಡ. ಬಹಳ ಸೂಕ್ಷ್ಮವಾಗಿ ಗಮನಿಸಿದರೆ ದಲಿತರ ವಿರೋಧ ನಿಜವಾಗಿಯೂ ಎಲ್ಲ ಎಂಬುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಯಾರೋ ವಿರೋಧಿಸಿದರು ಎಂದುಕೊಳ್ಳೋಣ. ಅದಕ್ಕೆ ದೇವೇಗೌಡರು ನಿಜವಾದ ರಾಜಕಾರಣ ಮುತ್ಸದ್ದಿ (Political Statesman)ಯಾಗಿದ್ದರೆ ಬೆಲೆ ಕೊಡಬಾರದು. ಏಕೆಂದರೆ, ಡಾ|| ಅಂಬೇಡ್ಕರರ ಹೆಸರನ್ನು ಈಗಾಗಲೇ ಸಾಕಷ್ಟು ವಿಶ್ವವಿದ್ಯಾಲಯಗಳಿಗೆ ಇಟ್ಟಾಗಿದೆ ಮತ್ತು ಭಾರತದ, ಕರ್ನಾಟಕದ ಇನ್ನಿತರ ವಿಶ್ವವಿದ್ಯಾಲಯಗಳಿಗೆ ಇಡುವ ಅವಕಾಶ ಹೇರಳವಾಗಿದೆ. ಅತ್ಯಂತ ನ್ಯಾಯೋಚಿತವಾದ ಬೇಡಿಕೆಯ್ನಾಗಿರುವ ಈ ನಾಮಕರಣ ಕ್ರಿಯೆಯನ್ನು ಬೇಗನೇ ಪೂರ್ತಿಗೊಳಿಸಿ, ಕರ್ನಾಟಕದ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಯಾವುದಾದರೊಂದಕ್ಕೆ ಡಾ|| ಅಂಬೇಡ್ಕರರ ಹೆಸರಿಟ್ಟರೆ ಅದಕ್ಕೆ ಬಸವಾಭಿಮಾನಗಳ ವಿರೋಧವಿಲ್ಲ, ಮತ್ತು ಪೂರ್ಣ ಬೆಂಬಲವಿದೆ. ಶರಣ ಬಂಧುಗಳೇ, ಮುಖ್ಯಮಂತ್ರಿ ದೇವೇಗೌಡರ ಹೇಳಿಕೆಯಿಂದ ಶಾಸನ ಸಭೆ, ಜೆ.ಹೆಚ್. ಪಟೇಲರಿಗೆ ಅವಮಾನವಾಗಿರುವುದು ಅತ್ತಲಿರಲಿ, ನಮ್ಮೆಲ್ಲರ ಅಸಂಖ್ಯಾತರ ಆರಾಧ್ಯಗುರು ಬಸವಣ್ಣನವರ ಹೆಸರನ್ನು ಈ ರೀತಿ ಹಿಗ್ಗಾಮುಗ್ಗಾ ಎಳೆದಾಡಲು ಅವಕಾಶ ಮಾಡಿರುವುದು ಅಪಾರ ಅವಮಾನ ಉಂಟುಮಾಡಿದೆ; ಮತದಾನದಲ್ಲಿ (ಸತ್ವದಿಂದ ಅಲ್ಲದಿದ್ದರೂ, ಛಲಹೀನರಾಗಿಯೂ ಗಾತ್ರದಿಂದ ಅಂದರೆ ಜನಸಂಖ್ಯೆಯ ದೃಷ್ಟಿಯಿಂದ) ನಿರ್ಣಾಯಕ ಪಾತ್ರ ವಹಿಸುತ್ತಿರುವ ಲಿಂಗಾಯತರ (ಮತ್ತು ಲಿಂಗಾಯತೇತರ ಬಸವಾಭಿಮಾನಿಗಳ) ಆತ್ಮಾಭಿಮಾನವನ್ನು ಶ್ರೀ ದೇವೇಗೌಡರ ಹೇಳಿಕೆ ಕೆಣಕಿದೆ.

ಆದ್ದರಿಂದ ಈ ದಿಶೆಯಲ್ಲಿ ಎಲ್ಲ ಭಿನ್ನಾಭಿಪ್ರಾಯಗಳನ್ನೂ ಮರೆತು ಲಿಂಗಾಯತರು ಮತ್ತು ಬಸವಾಭಿಮಾನಿಗಳು ಒಗ್ಗಟ್ಟಿನಿಂದ ಹೋರಾಟ ರೂಪಿಸಬೇಕಾಗಿದೆ. ಕಲಬುರ್ಗಿ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಿದ ಸರ್ಕಾರಿ ಆದೇಶ ಹೊರಬೀಳುವ ತನಕ ಚಳುವಳಿಯನ್ನು ಮುಂದುವರಿಸಿ, ಉತ್ಕಟಗೊಳಿಸಬೇಕಾಗಿದೆ. ಗುರಿ ಮುಟ್ಟುವವರೆಗೆ ವಿಶ್ರಾಂತಿ ಪಡೆಯಬಾರದಾಗಿ ಕೋರಿ, ಉಪವಾಸ ಸತ್ಯಾಗ್ರಹ, ರಾಸ್ತಾರೋಕೋ, ಪ್ರತಿಭಟನಾ ಪ್ರದರ್ಶನ ಹೀಗೆ ಸಾಧ್ಯವಿರುವ ಎಲ್ಲ ಅಸ್ತ್ರಗಳನ್ನು ಬಳಸಿ ಕರ್ನಾಟಕ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ವಿನಂತಿಸುತ್ತೇವೆ.

21-3-96

- ಜಗದ್ಗುರು ಮಾತೆ ಮಹಾದೇವಿ
ಅಧ್ಯಕ್ಷೆ, ಬಸವ ಧರ್ಮದ ಮಹಾಜಗದ್ಗುರು ಪೀಠ,
ಕೂಡಲ ಸಂಗಮ

ಕೊನೆಯ ಮಾತು :

"ಚುನಾವಣೆ ಬಂದಿದೆ ದಿನಾಂಕ ಘೋಷಿತವಾಗಿವೆ. ಸರ್ಕಾರವು ನಿರ್ಣಯ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂಬ ಸಂದೇಹ ಬೇಡ. ಏಕೆಂದರೆ

1. ಇದು ಬಹಳ ಮೊದಲೇ ಆರಂಭವಾಗಿರುವ ನ್ಯಾಯಯುತ ಬೇಡಿಕೆಯೊಡನೆ ಕೂಡಿದ ಹೋರಾಟ.
2. ಇದು ಯಾವುದೇ ಪಕ್ಷ ನೀಡಿರುವ, ನೀಡುತ್ತಿರುವ ಚುನಾವಣಾ ಭರವಸೆಯಲ್ಲ. ಜನರಿಂದಲೇ ಎದ್ದಿರುವ ಬೇಡಿಕೆ. ಸರ್ಕಾರ ಆ ಬೇಡಿಕೆ ಪೂರೈಸಬೇಕಾಗಿದೆಯಷ್ಟೆ?
3. ಸಾಮಾನ್ಯವಾಗಿ ಒಂದು ಹೊಸ ಚುನಾವಣೆ ಭರವಸೆ ನೀಡಿದಾಗ ವಿರೋಧ ಪಕ್ಷದವರು ಸರ್ಕಾರವನ್ನು ಆಕ್ಷೇಪಿಸಬಹುದು, ಆಮಿಷ ಒಡ್ಡುತ್ತಿದ್ದಾರೆ ಎಂದು. ಆದರೆ ಇಲ್ಲಿ, ವಿರೋಧ ಪಕ್ಷದವರೇ ಶಾಸನ ಸಭೆ-ಪರಿಷತ್ತಿನಲ್ಲಿ ವಿಷಯ ಪ್ರಸ್ತಾಪಿಸಿ ನಿರ್ಣಯಿಸಲು ಪ್ರೇರಣೆ ನೀಡಿದ್ದಾರೆ. ಹೀಗಾಗಿ ಶ್ರೀ ದೇವೇಗೌಡರ ಹೇಳಿಕೆಯಿಂದ ವಿರೋಧ ಪಕ್ಷದವರಿಗೇ (ಅಧಿಕಾರರೂಢ ಪಕ್ಷದ ಶಾಸಕರೂ ಸೇರಿದಂತೆ) ಅವಮಾನವಾಗಿದೆ.

ಭರವಸೆ ನಂಬಬೇಡಿ

ಚುನಾವಣೆಯ ನಂತರ ಮುಖ್ಯಮಂತ್ರಿಗಳು ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಿಯೇ ಮಾಡುತ್ತಾರೆ ಎಂಬ ಆಡಳಿತಾರೂಢ ಪಕ್ಷದ ಸಚಿವರ, ಶಾಸಕರ ಮಾತು ನಂಬಬೇಡಿ. ಏಕೆಂದರೆ ಈಗ ಯಾರ ವಿರೋಧವೂ ಇಲ್ಲದೆ, ವಿರೋಧ ಪಕ್ಷದವರ ಸಂಪೂರ್ಣ ಬೆಂಬಲ ಇದ್ದೂ ನಾಮಕರಣ ಪ್ರಕ್ರಿಯೆ ವಿಳಂಬವಾಗಲು ಶ್ರೀ ದೇವೇಗೌಡರು ಮತ್ತು ಅವರ ಕೆಲವು ವೀರಶೈವವಾದಿ ಸಲಹೆಗಾರರು ಕಾರಣ. ಅಂದಾಗ ಚುನಾವಣೆ ಮುಗಿಯುವ ತನಕ ಮುಖ್ಯ ಮಂತ್ರಿಗಳು, ಅವರ ಸಚಿವ ಸಂಪುಟ ಕಾಯುವ ಅಗತ್ಯವೇನಿಲ್ಲ ಬೇಗನೇ ಆದೇಶ ಹೊರಡಿಸಿ, ಕೀರ್ತಿಶಾಲಿಗಳಾಗಲು ಚಳುವಳಿಯ ಮೂಲಕ ಪ್ರೇರೇಪಿಸಿ.

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ
ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	-	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	-	ಮಾಸಿಕ.
3.	ಮುದ್ರಕರ ಹೆಸರು	-	ಸೋದರಿ ಕಸ್ತೂರಿ.
	ಭಾರತದ ಪ್ರಜೆಯೆ?	-	ಹೌದು.
	ವಿಳಾಸ	-	ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
4.	ಪ್ರಕಾಶಕರ ಹೆಸರು.	-	ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ	-	ಹೌದು
	ವಿಳಾಸ	-	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ, ಬೆಂಗಳೂರು - 560 010
5.	ಸಂಪಾದಕರು ಹೆಸರು	-	ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ?	-	ಹೌದು
	ವಿಳಾಸ	-	ಬಸವ ಮಂಟಪ, ರಾಜಾಜಿನಗರ, ಬೆಂಗಳೂರು - 560 010
6.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ ಶೇ 1 ಕ್ಕಿಂತ ಹೆಚ್ಚು ಭಾಗಕ್ಕೆ ಪಾಲು ದಾರರ ಹೆಸರು ಮತ್ತು ವಿಳಾಸ	-	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560 010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ದಿನಾಂಕ 1-3- 1996

ಪ್ರಕಾಶನ
ಬಿ. ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು - 560 010



ಜಗನ್ಮಾತಾ ಅಕ್ಕಮಹಾದೇವಿ ಅನುಭವ ಪೀಠದ
ಪ್ರಥಮ ಜಗದ್ಗುರು ಮಾತೆ ಮಹಾದೇವಿಯವರು



ದಿ. 15-4-1996ರಂದು ಎರಡನೆಯ ಜಗದ್ಗುರುವಾಗಿ ಪೀಠಾರೋಹಣ
ಮಾಡಲಿರುವ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ